# ಹೆಗ್ಗುರುತು:

## ತ್ಯಾಜ್ಯ ಆಯುವವರ ಕಥೆಗಳು ಮತ್ತು ಏಷ್ಯಾದ  ತ್ಯಾಜ್ಯ ಆಯುವವರು

(ಸಂಪುಟ 1 : ಭಾರತ)



©AMIT THAVARAJ, FOR KKPKP

ಹೆಗ್ಗುರುತು : ತ್ಯಾಜ್ಯ ಆಯುವವರ ಕಥೆಗಳು ಮತ್ತು ಏಷ್ಯಾದ ತ್ಯಾಜ್ಯ ಆಯುವವರು
(ಸಂಪುಟ 1 : ಭಾರತ)
©ಜನವರಿ 2023 : ಗ್ಲೋಬಲ್ ಅಲಯನ್ಸ್ ಫಾರ್ ಇನ್ಸಿನರೇಟರ್ ಆಲ್ಟರ್ನೇಟಿವ್ಸ್ ಯುನಿಟ್ 330, ಈಗಲ್ ಕೋರ್ಟ್ ಕಾಂಡೋಮಿನಿಯಮ್, 26 ಮಟಲಿನೋ ಸ್ಟ್ರೀಟ್, ಕ್ವಿಜಾನ್ ಸಿಟಿ, ಫಿಲಿಪೈನ್ಸ್

GAIA (ಗ್ಲೋಬಲ್ ಅಲೈಯನ್ಸ್ ಫಾರ್ ಇನ್ಸಿನರೇಟರ್ ಆಲ್ಟರ್ನೇಟಿವ್ಸ್) ಎಂಬುದು 92 ದೇಶಗಳ 1,000 ಕ್ಕೂ ಹೆಚ್ಚು ಸಂಸ್ಥೆಗಳನ್ನು ಪ್ರತಿನಿಧಿಸುವ ತಳಮಟ್ಟದ ಗುಂಪುಗಳು ಮತ್ತು ರಾಷ್ಟ್ರೀಯ ಹಾಗೂ ಪ್ರಾದೇಶಿಕ ಒಕ್ಕೂಟಗಳ ಜಾಲವಾಗಿದೆ.

ಪ್ಲಾಸ್ಟಿಕ್ ಸೊಲ್ಯೂಷನ್ಸ್ ಫಂಡ್ (ಪಿಎಸ್‌ಎಫ್) ಹಣಕಾಸಿನ ಬೆಂಬಲದ ಮೂಲಕ ಈ ಪ್ರಕಟಣೆ ಸಾಧ್ಯವಾಗಿದೆ. ಆದರೆ ಈ ಪ್ರಕಟಣೆಯಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಪಿಎಸ್‌ಎಫ್ ಮತ್ತು ಅದರ ನಿಧಿದಾರರ ಅಭಿಪ್ರಾಯಗಳನ್ನು ಪ್ರತಿಬಿಂಬಿಸುವುದಿಲ್ಲ.

ಈ ವರದಿ ಅಥವಾ ಅದರ ಭಾಗಗಳನ್ನು ಸಂಪೂಣವಾಗಿ ಒಪ್ಪಿಕೊಂಡು, ವಾಣಿಜ್ಯೇತರ ಉದ್ದೇಶಗಳಿಗಾಗಿ ಬಳಸಿಕೊಳ್ಳಬಹುದು. ಆದರೆ ಹಕ್ಕುಸ್ವಾಮ್ಯ ಹೊಂದಿರುವವರ ಲಿಖಿತ ಅನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಈ ವರದಿಯ ಮಾರಾಟ ಮತ್ತು ಮರುಮದ್ರಣವನ್ನು ನಿಷೇಧಿಸಲಾಗಿದೆ.

ಲೇಖಕಿ ಮತ್ತು ವ್ಯವಸ್ಥಾಪಕ ಸಂಪಾದಕಿ
ಶೆರ್ಮಾ ಬೆನೋಸಾ

ಭಾಷಾ ಸಂಪಾದಕಿ
ಫೆಲಿಸಿಯಾ ಡೈರೆಕ್ಟ್

ಅನುವಾದಕರು / ಅರ್ಥನಿರೂಪಣೆ
ನಿತ್ಯಾನಂದನ್. ಜೆ (ಹಸಿರು ದಳ)
ಲುಬಿನ ಅನಂತಕೃಷ್ಣನ್ (ಕೆಕೆಪಿಕೆಪಿ)
ನಮಿತಾ ಭಾವೆ (ಕೆಕೆಪಿಕೆಪಿ)
ನಿಕಿತಾ ಪಾಟೀಲ್ (ಎಸ್‌ಎಂಎಸ್)

ಪರಿಶೀಲನೆ
GAIA ಏಷ್ಯಾ ಫೆಸಿಪಿಕ್ ಸಿಬ್ಬಂದಿ
ಅರ್ಪಿತಾ ಭಗತ್, ಜಾನ್ಸೆನ್ ಕಾಲ್ವೆಲೊ, ಶಿಬು ನಾಯರ್

ಹಸಿರು ದಳ, ಬೆಂಗಳೂರು
ನಳಿನಿ ಶೇಖರ್, ಕಾರ್ತಿಕ್ ನಟರಾಜನ್, ನಿತ್ಯ ಜೋಷುಯ

ಸ್ತ್ರೀ ಮುಕ್ತಿ ಸಂಘಟನೆ (ಎಸ್‌ಎಂಎಸ್), ಮುಂಬೈ
ಜ್ಯೋತಿ ಮಾಪ್ಸೇಕರ್

ಕಾಗದ್ ಕಂಚ್ ಪತ್ರ ಕಷ್ಟಕಾರಿ ಪಂಚಾಯತ್ (ಕೆಕೆಪಿಕೆಪಿ), ಪುಣೆ
ಲಕ್ಷ್ಮೀ ನಾರಾಯಣ್

ಭಾರತೀಯ ತ್ಯಾಜ್ಯ ಆಯುವವರ ಒಕ್ಕೂಟ
ಕಬೀರ್ ಅರೋರಾ

ಕೃತಜ್ಞತೆಗಳು :

GAIA ಏಷ್ಯಾ ಪೆಸಿಫಿಕ್ ತನ್ನ ಒಕ್ಕೂಟದ ಸದಸ್ಯರಿಗೆ ಅವರು ನಿರ್ವಹಿಸುತ್ತಿರುವ ಶೂನ್ಯ ತ್ಯಾಜ್ಯ ಕಾರ್ಯಕ್ಕಾಗಿ ಮತ್ತು ಈ ಪ್ರಕಟಣೆಯ ಅಭಿವೃದ್ಧಿಗೆ ಅವರು ಒದಗಿಸಿದ ಬೆಂಬಲಕ್ಕಾಗಿ ಕೃತಜ್ಞವಾಗಿರುತ್ತದೆ. ಕಾಗದ್ ಕಂಚ್ ಪತ್ರ ಕಷ್ಟಕಾರಿ ಪಂಚಾಯತ್ , ಸ್ತ್ರೀ ಮುಕ್ತಿ ಸಂಘಟನೆ, ಮತ್ತು ಹಸಿರು ದಳ ಸಂಸ್ಥೆಗಳ ಸಿಬ್ಬಂದಿಗಳು ಈ ಪ್ರಕಟಣೆಯ ಸಂಬಂಧಿತ ವಿಭಾಗಗಳನ್ನು ಪರಿಶೀಲಿಸಿದ್ದಾರೆ. ಬಿಯಾಂಕಾ ಫೆರ್ನಾಂಡಿಸ್ ಮತ್ತು ನಿತ್ಯ ಜೋಶುವಾ (ಹಸಿರು ದಳ) ಮತ್ತು ಲುಬ್ನಾ ಅನಂತಕೃಷ್ಣನ್ (ಕೆಕೆಪಿಕೆಪಿ) ಸಂದರ್ಶನಗಳನ್ನು ನಡೆಸಲು ನೆರವಾಗಿದ್ದಾರೆ. ಒಟ್ಟಾರೆಯಾಗಿ ಈ ಪ್ರಕಟಣೆಗಾಗಿ ಸಂದರ್ಶನ ಮಾಡಲು ಒಪ್ಪಿಕೊಂಡ ಮತ್ತು ತಮ್ಮ ಕಥೆಗಳನ್ನು ಹಂಚಿಕೊಂಡ ಎಲ್ಲಾ ತ್ಯಾಜ್ಯ ಆಯುವವರಿಗೆ ಮತ್ತು ಪ್ರಕಟಣೆಗೆ ಶ್ರಮಿಸಿದ ಎಲ್ಲರಿಗೂ ನಾವು ನಮ್ಮ ಪ್ರಾಮಾಣಿಕ ಕೃತಜ್ಞತೆ ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇವೆ.




©AMIT THAVARAJ, FOR KKPKP


©AMIT THAVARAJ, FOR KKPKP

# TABLE OF CONTENTS

ಪರಿವಿಡಿ

ಮುನ್ನುಡಿ 4-5

ಸಾಲಿಡ್ ವೇಸ್ಟ್ ಕಲೆಕ್ಷನ್ ಅಂಡ್ ಹ್ಯಾಂಡಲಿಂಗ್ (SWaCH)
ವ್ಯವಸ್ಥೆಗಳ ಪರಿವರ್ತನೆಯ ಮೂಲಕ ಜೀವನ ಪರಿವರ್ತನೆ 8-13

ಆಶಾ ಮತ್ತು ಸಾರಿಕಾ
ತ್ಯಾಜ್ಯ ಆಯುವ ಮೂಲಕ ತಮ್ಮನ್ನು ತಾವೇ ಉನ್ನತೀಕರಿಸಿಕೊಂಡವರು 14-19

ಹಸಿರು ದಳ
ವ್ಯವಸ್ಥಿತ ಪರಿವರ್ತಕ ಬದಲಾವಣೆಗಳನ್ನು ಸ್ಥಾಪಿಸುವುದು 20-25

ಸ್ತ್ರೀ ಮುಕ್ತಿ ಸಂಘಟನೆ
ಮಹಿಳೆಯರಿಗೆ ಮಹಿಳೆಯರ ಬೆಂಬಲ 26-31

ಅಲಯನ್ಸ್ ಆಫ್ ಇಂಡಿಯನ್ ವೇಸ್ಟ್ ಪಿಕ್ಕರ್ಸ್
ರಾಷ್ಟ್ರೀಯ ವೇದಿಕೆಗಳಲ್ಲಿ ತ್ಯಾಜ್ಯ ಆಯುವವರ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವುದು 32-35



©AMIT THAVARAJ, FOR KKPKP


...IT THAVARAJ, FOR KKPKP

# FOREWORD



ತ್ಯಾಜ್ಯ ಆಯುವವರ ಬದುಕಿನ ನೈಜತೆಯು ವ್ಯಂಗ್ಯ ಮತ್ತು ಅಪಾರ್ಥಗಳಿಂದ ಕೂಡಿದೆ. ಕಳೆದ ಅನೇಕ ದಶಕಗಳಿಂದ ಅವರ ಬದುಕಿನ ನೈಜತೆ ಬೆಳಕಿಗೆ ಬಾರದೇ, ಹಾಗೆಯೇ ಮುಂದುವರೆದಿದ್ದು, ಅವರನ್ನು ಸಮಾಜವು ಅಗೌರವದಿಂದ ನಡೆಸಿಕೊಳ್ಳುತ್ತಿದೆ.

ತ್ಯಾಜ್ಯ ಆಯುವವರು ತ್ಯಾಜ್ಯ ನಿರ್ವಹಣೆ ಸಮಸ್ಯೆಗಳ ಸಂದರ್ಭದಲ್ಲಿ ಮುಂಚೂಣಿಯಲ್ಲಿರುವವರು. ಆದರೆ ಇಲ್ಲಿಯವರೆಗೆ ತ್ಯಾಜ್ಯ ನಿರ್ವಹಣೆ ಕುರಿತ ನೀತಿ ನಿರೂಪಣೆ, ಚರ್ಚೆಗಳು ಮತ್ತು ನಿರ್ಧಾರಗಳಲ್ಲಿ ಅವರು ಭಾಗಿಯಾಗಿಲ್ಲ ಅಥವಾ ಅವರೊಂದಿಗೆ ಸಮಾಲೋಚನೆಯನ್ನೂ ನಡೆಸಿರುವುದಿಲ್ಲ. ಸಾಮಾನ್ಯವಾಗಿ ಹವಾನಿಯಂತ್ರಿತ ಕೊಠಡಿಗಳಲ್ಲಿ ನಡೆಯುವ ಈ ಚರ್ಚೆಗಳು, ನಿರ್ವಹಣೆಯಾಗದಿರುವ ತ್ಯಾಜ್ಯದ ದುರ್ವಾಸನೆ ಮತ್ತು ಕೊಳಕಿನಿಂದ ದೂರವಿರುತ್ತವೆ. ಆದರೆ ಈ ಚರ್ಚೆಗಳಲ್ಲಿ ಈ ಗ್ರಹವನ್ನು ಮಾಲಿನ್ಯಗೊಳಿಸುತ್ತಿರುವ ವಿವಿಧ ಸಂಸ್ಥೆಗಳ ಪ್ರತಿನಿಧಿಗಳು ಪ್ರಾಬಲ್ಯ ಹೊಂದಿದ್ದಾರೆ.

ತ್ಯಾಜ್ಯ ಆಯುವವರ ಕೊಡುಗೆ ಸಮಾಜಕ್ಕೆ ಅಪಾರವಾದದು. ಸೂಕ್ತ ರೀತಿಯಲ್ಲಿ ತ್ಯಾಜ್ಯ ನಿರ್ವಹಣೆ ಮಾಡಿ, ಸಾಗಾಣಿಕೆ ವೆಚ್ಚವನ್ನು ತಗ್ಗಿಸುವ ಮೂಲಕ ನಗರಗಳಿಗೆ ಲಕ್ಷಾಂತರ ಡಾಲರ್‌ಗಳನ್ನು ಉಳಿಸುತ್ತಾರೆ. ಪ್ರತಿದಿನ ನಗರಗಳಲ್ಲಿ ಸಂಗ್ರಹವಾಗುವ ಟನ್ನಗಳಷ್ಟು ತ್ಯಾಜ್ಯವನ್ನು ವಿಲೇವಾರಿ ಮಾಡಿ, ಬೇರೆಡೆ ಸಾಗಿಸುತ್ತಾರೆ. ಈ ಮೂಲಕ ಪರಿಸರ ಮತ್ತು ಸಾರ್ವಜನಿಕ ಆರೋಗ್ಯ ಸುರಕ್ಷತೆಗಾಗಿ ಶ್ರಮಿಸುತ್ತಾರೆ. ಅನೇಕ ದೇಶಗಳಲ್ಲಿ ತ್ಯಾಜ್ಯ ಆಯುವವರು ಪುರಸಭೆಗಳಲ್ಲಿ ಕಡಿಮೆ ಅಥವಾ ಯಾವುದೇ ವೆಚ್ಚವಿಲ್ಲದೆ ಲಭ್ಯವಿರುವ ಘನ ತ್ಯಾಜ್ಯ ನಿರ್ವಹಣೆಯ ಕಾರ್ಯವನ್ನು ನಿರ್ವಹಿಸುತ್ತಾರೆ. ವಿಪರ್ಯಾಸವೆಂದರೆ, ಅವರ ಕೆಲಸವನ್ನು ಕಾನೂನುಬದ್ಧ ಹಾಗೂ ಅವರನ್ನು ಕಾರ್ಮಿಕ ಎಂದು ಪರಿಗಣಿಸಲಾಗುವುದಿಲ್ಲ. ದುರದೃಷ್ಟವೆಂದರೆ ಅವರ ಕೊಡುಗೆಗಳಿಗಾಗಿ ಅವರಿಗೆ ಸಂಭಾವನೆಯನ್ನೂ ನೀಡಲಾಗುವುದಿಲ್ಲ. ಕನಿಷ್ಠ ಧನ್ಯವಾದಗಳನ್ನು ಹೇಳುವುದಿಲ್ಲ. ಕೃತಜ್ಞತೆಯ ಬದಲಿಗೆ, ಅವರನ್ನು ಅಪಹಾಸ್ಯ ಮತ್ತು ಅವಮಾನ ಮಾಡಲಾಗುತ್ತದೆ. ಅನೇಕ ಸಲ ಕೇವಲ ಕೆಲಸವನ್ನು ಮಾಡುವುದಕ್ಕಾಗಿಯೇ ಅವರನ್ನು ಬೆದರಿಸಿ, ಕಿರುಕುಳ ನೀಡಿ, ಕಳ್ಳತನದಂತ ಆರೋಪಗಳನ್ನೂ ಸಹ ಅವರ ಮೇಲೆ ಹೋರಿಸಲಾಗುತ್ತದೆ.

ಕಡೆಗಣಿಸಲ್ಪಟ್ಟಿರುವ, ತ್ಯಾಜ್ಯ ಆಯುವವರು ಹವಾಮಾನ ಬದಲಾವಣೆಯ ಅಪಾಯಗಳನ್ನು ಎದುರಿಸಲು ಹೆಚ್ಚು ದುರ್ಬಲರಾಗಿದ್ದಾರೆ. ಆದರೆ ತಮ್ಮ ಎಲ್ಲಾ ದುರ್ಬಲತೆಗಳ ಹೊರತಾಗಿಯೂ ಅವರು, ಜಾಗತಿಕ ತಾಪಮಾನ ಏರಿಕೆಯನ್ನು ವಿಳಂಬಗೊಳಿಸುವ ಪ್ರಮುಖ ಕೀಲಿಯನ್ನು ಹೊಂದಿದ್ದಾರೆ. ಇಪ್ಪತ್ತು ಪ್ರತಿಶತ ಮೀಥೇನ್ ಹೊರಸೂಸುವಿಕೆ ತ್ಯಾಜ್ಯದಿಂದ ಬರುತ್ತದೆ. ಹೀಗಾಗಿ ಸಂಪೂರ್ಣ ಬೆಂಬಲ ಒದಗಿಸಿದರೆ, ತ್ಯಾಜ್ಯ ಆಯುವವರು ಹವಾಮಾನ ಬದಲಾವಣೆ ತಗ್ಗಿಸುವಿಕೆಗೆ ಹೆಚ್ಚಿನ ಕೊಡುಗೆ ನೀಡಬಹುದು. ಆದರೂ ಪ್ರಸ್ತುತ, ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಎದುರಿಸಲು ತ್ಯಾಜ್ಯ ಆಯುವವರು ತಮ್ಮದೇ ಆದ ಮಾರ್ಗದಲ್ಲಿ ಶ್ರಮಿಸುತ್ತಿದ್ದಾರೆ.

ಸರ್ಕಾರಗಳು ದುಬಾರಿ ಮತ್ತು ಅಪಾಯಕಾರಿ ತಂತ್ರಜ್ಞಾನಗಳತ್ತ ಹೆಚ್ಚಿನ ಒಲವು ತೋರುತ್ತಿವೆ. ಇದು ಸಮಸ್ಯೆಯನ್ನು ಇನ್ನಷ್ಟು ಹದಗೆಡಿಸುವುದರೊಂದಿಗೆ, ತ್ಯಾಜ್ಯ ಆಯುವವರನ್ನು ಬೇರೆಡೆ ಸ್ಥಳಾಂತರಿಸುತ್ತಿದೆ. ಈ ಸಮಸ್ಯೆಯನ್ನು ಪರಿಹರಿಸುವ ನಮ್ಮ ಆಶಯಗಳನ್ನು ಇಡೀ ವ್ಯವಸ್ಥೆಯಿಂದ ಹೊರಹಾಕುವ ಬೆದರಿಕೆಯನ್ನು ಕೂಡಾ ಎದುರಿಸುತ್ತಿದ್ದಾರೆ.

ಈ ದೃಷ್ಟಿಕೋನಗಳು ಪ್ರವರ್ಧಮಾನಕ್ಕೆ ಬರುತ್ತಿರುವುದು ಮತ್ತು ಆಧುನಿಕ ಕಾಲಕ್ಕೆ ಮುಂದುವರಿಯುವುದು ನಮಗೆ ಒಂದು ವಿಷಯವನ್ನು ಹೇಳುತ್ತದೆ : ನಿಷ್ಕ್ರಿಯ ವ್ಯವಸ್ಥೆಯನ್ನೇ ಆಧಾರವಾಗಿಟ್ಟುಕೊಂಡು, ಕಾರ್ಯನಿರ್ವಹಿಸುವ ಜಗತ್ತಿನಲ್ಲಿ ನಾವು ವಾಸಿಸುತ್ತಿದ್ದೇವೆ.

ಬದಲಾವಣೆಯ ಅವಶ್ಯಕತೆಯಿದೆ :
ಕಳೆದ ಕೆಲ ದಶಕಗಳಿಂದ ಬೆಂಗಳೂರಿನ ಹಸಿರು ದಳ, ಪುಣೆಯಸಾಲಿಡ್ ವೇಸ್ಟ್ ಕಲೆಕ್ಷನ್ ಅಂಡ್ ಹ್ಯಾಂಡಲಿಂಗ್ (ಸ್ವಚ್), ಮುಂಬೈನ ಸ್ತ್ರೀ ಮುಕ್ತಿ ಸಂಘಟನೆ, ಕಾಗದ್ ಕಂಚ್ ಪತ್ರ ಕಷ್ಟಕಾರಿ ಪಂಚಾಯತ್ (ಕೆಕೆಪಿಕೆಪಿ) ಮತ್ತು ಅಲಯನ್ಸ್ ಆಫ್ ಇಂಡಿಯನ್ ವೇಸ್ಟ್ ಪಿಕ್ಕರ್ಸ್ ದಂತಹ ತ್ಯಾಜ್ಯ ನಿರ್ವಹಣಾ ಸಂಸ್ಥೆಗಳು, ತಮ್ಮ ನಗರಗಳಲ್ಲಿ ವ್ಯವಸ್ಥಿತ ಬದಲಾವಣೆಗಳನ್ನು ಪರಿಚಯಿಸುವ ಅತ್ಯುತ್ತಮ ಕೆಲಸ ಮಾಡಿರುವುದು, ಸಾವಿರಾರು ತ್ಯಾಜ್ಯ ಆಯುವವರ ಜೀವನವನ್ನು ಪರಿವರ್ತಿಸಿದೆ.

ಈ ಸಂಸ್ಥೆಗಳ ಉತ್ತಮ ಕೆಲಸದಿಂದಾಗಿ, ಅನೇಕ ದಶಕಗಳಿಂದ ತಾರತಮ್ಯ ಮತ್ತು ಕಿರುಕುಳವನ್ನು ಅನುಭವಿಸಿದ ನಿರ್ಲಕ್ಷ್ಯಕ್ಕೊಳಗಾದ ತ್ಯಾಜ್ಯ ಶ್ರಮಿಕರು ಈಗ ಹೆಚ್ಚು ಸಶಕ್ತರಾಗಿ ನಿಂತಿದ್ದಾರೆ. ಅವರ ಸಾಮೂಹಿಕ ಧ್ವನಿಗಳು ಜೋರಾಗಿದ್ದು, ಅವರ ನಿಲುವುಗಳು ಈಗ ಸ್ಪಷ್ಟವಾಗಿವೆ. ಈಗ ಅವರು ಸೂಕ್ತ ಸ್ಥಾನಮಾನಕ್ಕಾಗಿ ಬೇಡಿಕೆ ಸಲ್ಲಿಸುತ್ತಿದ್ದು, ತಮ್ಮ ಮೇಲೆ ನೇರವಾಗಿ ಪರಿಣಾಮ ಬೀರುವ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಮಾತನಾಡಿ, ಸಮಸ್ಯೆಗಳನ್ನು ಪರಿಹರಿಸಲು ಒತ್ತಾಯಿಸುತ್ತಿದ್ದಾರೆ.

ತ್ಯಾಜ್ಯ ಆಯುವವರ ಮತ್ತು ತ್ಯಾಜ್ಯ ಕೆಲಸಗಾರರ ಬದುಕಿನ ನೈಜತೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವ ಪ್ರಕಟಣೆಗಳ ಸರಣಿಯಲ್ಲಿ ಈ ಪ್ರಕಟಣೆಯು ಮೊದಲನೆಯದು. ಈ ಪ್ರಕಟಣೆಯು ನಮ್ಮ ಸದಸ್ಯರು ಮತ್ತು ಅವರ ಮಿತ್ರ ಸಂಘಟನೆಗಳ ಶ್ರಮದ ಪ್ರತಿಫಲವಾಗಿದೆ.

ಇನ್ನೂ ಸಾಕಷ್ಟು ಕೆಲಸಗಳನ್ನು ಮಾಡಬೇಕಾಗಿದೆ. ಭಾರತದಲ್ಲಿ 1.5 ಮಿಲಿಯನ್ ತ್ಯಾಜ್ಯ ಆಯುವವರನ್ನು ಗುರುತಿಸಲಾಗಿದ್ದರೂ, ವ್ಯವಸ್ಥೆಯಲ್ಲಿ ಸೇರ್ಪಡೆಗೊಂಡವರ ಸಂಖ್ಯೆ ಇನ್ನೂ ಕಡಿಮೆಯಿದೆ. ಹೆಚ್ಚಿನವರು ಅನಿಶ್ಚಿತ ಪರಿಸ್ಥಿತಿಗಳಲ್ಲಿ, ಧ್ವನಿಯಿಲ್ಲದೆ ಮತ್ತು ಸಾಮಾಜಿಕ ರಕ್ಷಣೆಯಿಲ್ಲದೆ ಬದುಕುತ್ತಿದ್ದಾರೆ.

ವ್ಯವಸ್ಥೆಯಲ್ಲಿ ಹೆಚ್ಚಿನ ಬದಲಾವಣೆಗಳನ್ನು ಪರಿಚಯಿಸಲು ಮತ್ತು ಹೆಚ್ಚು ತ್ಯಾಜ್ಯ ಆಯುವವರನ್ನು ತಲುಪಲು ನಾವು ಈ ಸಂಸ್ಥೆಗಳನ್ನು ಬೆಂಬಲಿಸುತ್ತೇವೆ. ನಾವು ಸದಾ ಅವರ ಯಶಸ್ಸಿನ್ನು ಸಂಭ್ರಮಿಸಲು ಜೊತೆಯಾಗಿರುತ್ತೇವೆ. ತ್ಯಾಜ್ಯ ಆಯುವವರು ಈಗೀರುವ ಪರಿಸ್ಥಿತಿಯಿಂದ ಇನ್ನೂ ಸಾಕಷ್ಟು ಮುಂದೆ ಸಾಗಬೇಕಿದ್ದು ; ಅವರ ಪ್ರತಿ ಪರಿವರ್ತನೆಯ ಕಥೆಯೂ ಸಂಭ್ರಮಾಚರಣೆಗೆ ಯೋಗ್ಯವಾಗಿರುತ್ತದೆ.

# ON THE GROUND
























# ಸಾಲಿಡ್ ವೇಸ್ಟ್ ಕಲೆಕ್ಷನ್ ಅಂಡ್ ಹ್ಯಾಂಡಲಿಂಗ್ (ಸ್ವಚ್)

## ವ್ಯವಸ್ಥೆಗಳ ಪರಿವರ್ತನೆಯ ಮೂಲಕ ಜೀವನ ಪರಿವರ್ತನೆ

36 ವರ್ಷದ ಅನಿತಾ ಮಹಾದೇವ್ ಭೋಸಲೆ, ತ್ಯಾಜ್ಯ ಆಯುವುದೇ, ತನ್ನ ಜೀವನಾಡಿ ಎಂದು ನಿರ್ಧರಿಸಿದಾಗ, ಅವರ ಕುಟುಂಬದ ಸದಸ್ಯರು ತೀವ್ರ ಕಳವಳ ವ್ಯಕ್ತಪಡಿಸಿದರು. 9ನೇ ತರಗತಿಯನ್ನು ಪೂರ್ಣಗೊಳಿಸಿರುವ ಅವರು, ತ್ಯಾಜ್ಯ ಆಯುವವಳು ಎಂದು ಮುಜುಗರಕ್ಕೊಳಗಾಗಬಹುದು ಎಂದು ಕುಟುಂಬದ ಸದಸ್ಯರು ಭಾವಿಸಿದರು.

ಆದರೆ ಅನಿತಾ ಅವರು ಹಠ ಹಿಡಿದರು. ಪರಿಸರವನ್ನು ಸಂರಕ್ಷಿಸುವ, ನಗರದ ಆರೋಗ್ಯವನ್ನು ಉತ್ತೇಜಿಸುವ ಮತ್ತು ನಿರ್ವಹಣೆಯಿಲ್ಲದ ತ್ಯಾಜ್ಯದಿಂದ ಉಂಟಾಗುವ ರೋಗಗಳನ್ನು ತಡೆಗಟ್ಟುವಂತಹ ತ್ಯಾಜ್ಯ ಆಯುವ ಕಾರ್ಯವನ್ನು ಒಂದು ಪ್ರಮುಖ ಕೆಲಸ ಎಂದು ಅವರು ಭಾವಿಸಿದರು. ಇದು ಅವರಿಗೆ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಸಹ ನೀಡಿತು. ಇನ್ನು ಚಿಕ್ಕ ಮಕ್ಕಳ ತಾಯಂದಿರಿಗೆ ತಮ್ಮ ಮನೆಗಳನ್ನು ನಿರ್ವಹಿಸುವ ಅಗತ್ಯವಿದ್ದಲ್ಲಿ, ಅವರನ್ನು ಆರ್ಥಿಕವಾಗಿ ಸುಸ್ಥಿರಗೊಳಿಸಲು ಇದೊಂದು ಪ್ರಮುಖ ಪರಿಗಣನೆಯಾಗಿದೆ.

ಒಂದು ಕಾಲದಲ್ಲಿ ಆಕೆಯ ಕೆಲಸದಿಂದ ಭಯಭೀತರಾಗಿದ್ದ ಕುಟುಂಬವು ಇಂದು ಅವರನ್ನು ಬೆಂಬಲಿಸುತ್ತಿದ್ದು, ಅವರ ಮತ್ತು ಅವರ ಕೆಲಸದ ಬಗ್ಗೆ ಹೆಮ್ಮೆಪಡುತ್ತಿದೆ. ತ್ಯಾಜ್ಯ ಆಯುವ ಮೂಲಕ, ಅನಿತಾ ತನ್ನ ಕುಟುಂಬದ ಆರ್ಥಿಕತೆಗೆ ಕೊಡುಗೆ ನೀಡುತ್ತಿದ್ದು, ಅದು ಅವರ ಜೀವನವನ್ನು ಸುಧಾರಿಸಿದೆ.

**ಪರಿವರ್ತನೆ ಸನ್ನಿಹಿತವಾಗಿತ್ತು :**
ಸಾಲಿಡ್ ವೇಸ್ಟ್ ಕಲೆಕ್ಷನ್ ಅಂಡ್ ಹ್ಯಾಂಡಲಿಂಗ್ ಅಥವಾ SWaCH (ಸ್ಥಳೀಯ ಭಾಷೆಯಲ್ಲಿ 'ಸ್ವಚ್ಛ' ಎಂದರ್ಥ) ಸಂಸ್ಥೆಯ ಸದಸ್ಯೆಯಾಗಿರುವ ಅನಿತಾ ಅವರು ಪುಣೆಯ 3,500 ತ್ಯಾಜ್ಯ ಆಯುವವರಲ್ಲಿ ಒಬ್ಬರು. ಸ್ವಚ್ ಇದೊಂದು ಸ್ವಯಂ ಉದ್ಯೋಗಿ ತ್ಯಾಜ್ಯ ಸಂಗ್ರಾಹಕರು ಮತ್ತು ಇತರ ನಗರ ಪ್ರದೇಶದ ಬಡವರ ಸಂಪೂರ್ಣ ಸ್ವಾಮ್ಯದ ಭಾರತದ ಮೊದಲ ಸಹಕಾರಿ ಸಂಸ್ಥೆಯಾಗಿದೆ. ಇದು ಪುಣೆಯ ನಾಗರಿಕರಿಗೆ ತ್ಯಾಜ್ಯ ನಿರ್ವಹಣೆ ಸೇವೆಗಳನ್ನು ಒದಗಿಸುವ ಒಂದು ಸ್ವಾಯತ್ತ ಉದ್ಯಮವಾಗಿದೆ.



1993ರಲ್ಲಿ ಕಾಗದ್ ಕಂಚ್ ಪತ್ರ ಕಷ್ಟಕಾರಿ ಪಂಚಾಯತ್ (ಕೆಕೆಪಿಕೆಪಿ) ಸಂಸ್ಥೆಯು ತ್ಯಾಜ್ಯ ಆಯುವವರ ಟ್ರೇಡ್ ಯೂನಿಯನ್ನ ಸಂಘಟಿತ ವ್ಯವಸ್ಥೆಯನ್ನು ರೂಪಿಸಿತು. ನಂತರ ಸ್ವಚ್ ಸಂಸ್ಥೆಯು ಸುಮಾರು 5 ಮಿಲಿಯನ್ ಜನರಿಗೆ ನೆಲೆಯಾಗಿರುವ ಪುಣೆ ನಗರದಲ್ಲಿ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಗಣನೀಯವಾಗಿ ಸುಧಾರಿಸಿದೆ. ಇದರೊಂದಿಗೆ ತನ್ನ ಸದಸ್ಯರು ಮತ್ತು ಅವರ ಕುಟುಂಬಗಳ ಜೀವನವನ್ನು ಬದಲಾಯಿಸಿದೆ. ಪುಣೆ ನಗರದ ಶೇ.70ರಷ್ಟು ತ್ಯಾಜ್ಯ ಸಂಗ್ರಹಣೆ ಸೇವೆಗಳನ್ನು ಸ್ವಚ್ ಸಂಸ್ಥೆಯು ಪೂರೈಸುತ್ತಿದೆ. ಇದು ಪ್ರತಿದಿನ 800,000 ಮನೆಗಳಿಗೆ ತನ್ನ ಸೇವೆಯನ್ನು ನೀಡುತ್ತಿದ್ದು ವಾರ್ಷಿಕವಾಗಿ 70,000 ಟನ್ ತ್ಯಾಜ್ಯವನ್ನು ಮರುಬಳಕೆ ಮಾಡುತ್ತಿದೆ. ಈ ಮೂಲಕ 2021ರಲ್ಲಿ ಪುಣೆ ಮುನ್ಸಿಪಲ್ ಕಾರ್ಪೊರೇಷನ್ (PMC)ಗೆ 100 ಕೋಟಿ (INR 1 ಬಿಲಿಯನ್) ಹಣವನ್ನು ಉಳಿಸಿದೆ.

ಸ್ವಚ್ ಸಂಸ್ಥೆಯ ಸ್ಥಾಪನೆಗೂ ಮುನ್ನ, ಪುಣೆ ನಗರದಲ್ಲಿ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯು ಅಸಮರ್ಥವಾಗಿತ್ತು. ಘನತ್ಯಾಜ್ಯ ನಿರ್ವಹಣೆಯ ಅನುಷ್ಠಾನದ

[1,2] SWaCH website. https://swachcoop.com/ Accessed 23 December 2022.





©AMIT THAVARAJ, FOR KKPKP

ಜವಾಬ್ದಾರಿಯನ್ನು ಹೊಂದಿರುವ ಪಿಎಂಸಿ, ಈ ಜವಾಬ್ದಾರಿಯನ್ನು ನಿರ್ವಹಿಸಲು ಅಗತ್ಯವಾದ ರಚನೆಯಾಗಲಿ ಅಥವಾ ಕ್ರಿಯಾ ಯೋಜನೆಯಾಗಲಿ ಹೊಂದಿರಲಿಲ್ಲ. ಆ ಸಮಯದಲ್ಲಿ, ಕೇವಲ ಶೇ.7ರಷ್ಟು ಮನೆಗಳಿಗೆ ಮಾತ್ರ ಮನೆಮನೆಗೆ ತೆರಳಿ ಔಪಚಾರಿಕವಾಗಿ ತ್ಯಾಜ್ಯ ಸಂಗ್ರಹಣೆಯ ಸೇವೆ ಸಲ್ಲಿಸಲಾಗುತ್ತಿತ್ತು. ಅದೇ ರೀತಿ ಕೇವಲ ಶೇ.42ರಷ್ಟು ಪುರಸಭೆಯ ಸಮುದಾಯದ ತ್ಯಾಜ್ಯ ತೊಟ್ಟಿಗಳನ್ನು ಪ್ರತಿದಿನ ಖಾಲಿ ಮಾಡಲಾಗುತ್ತಿತ್ತು. ಪುರಸಭೆಯ ಔಪಚಾರಿಕ ವ್ಯವಸ್ಥೆಯಲ್ಲಿ ಯಾವುದೇ ತ್ಯಾಜ್ಯ ವಿಂಗಡಣೆ ಅಥವಾ ತ್ಯಾಜ್ಯ ನಿರ್ವಹಣೆಯ ವ್ಯವಸ್ಥೆಯೇ ಇರಲಿಲ್ಲ. ಹೀಗಾಗಿ, ಮಿಶ್ರಿತ ತ್ಯಾಜ್ಯವನ್ನು ಸಂಗ್ರಹಿಸಿ ನಗರದ ನೆಲಭರ್ತಿಯಲ್ಲಿ ಸುರಿಯಲಾಗುತ್ತಿತ್ತು. ನಗರದಲ್ಲಿ ಘನತ್ಯಾಜ್ಯ ನಿರ್ವಹಣೆ ಎಂಬುದು ಕೇವಲ ಸಂಗ್ರಹಣೆ, ಸಾರಿಗೆ ಮತ್ತು ವಿಲೇವಾರಿಗೆ ಮಾತ್ರ ಸೀಮಿತವಾಗಿತ್ತು.

ಉತ್ತಮ ತ್ಯಾಜ್ಯ ನಿರ್ವಹಣಾ ವ್ಯವಸ್ಥೆ ಇಲ್ಲದಿರುವಾಗ, ಸಂಚಾರಿ ತ್ಯಾಜ್ಯ ಆಯುವವರು ಮನೆಗಳು ಮತ್ತು ಸಂಸ್ಥೆಗಳಿಂದ ಉತ್ಪತ್ತಿಯಾಗುವ ಮರುಬಳಕೆ ಮಾಡಬಹುದಾದ ಕೆಲವು ವಸ್ತುಗಳನ್ನು ಬೀದಿಗಳು ಮತ್ತು ನೆಲಭರ್ತಿ ಗಳಿಂದ ಮರಳಿ ಸಂಗ್ರಹಿಸುತ್ತಿದ್ದರು. ಆ ಸಮಯದಲ್ಲಿ ತ್ಯಾಜ್ಯ ಆಯುವುದು ಕೀಳರಿಮೆಯಾಗಿತ್ತು. ತ್ಯಾಜ್ಯ ಆಯುವವರನ್ನು ನಾಯಿಗಳು ಅಟ್ಟಿಸಿಕೊಂಡು ಹೋಗುತ್ತಿದ್ದವು, ಸ್ಥಳೀಯ ನಿವಾಸಿಗಳು ಅಗೌರವ ತೋರುತ್ತಿದ್ದರು, ಸಾಮಾನ್ಯವಾಗಿ ಕಳ್ಳತನದ ಆರೋಪದ ಮೂಲಕ ಪೊಲೀಸರಿಂದ ಕಿರುಕುಳ ನೀಡಲಾಗುತ್ತಿತ್ತು.

ಆಗ ಪರಿಸ್ಥಿತಿ ಎಷ್ಟು ಭೀಕರವಾಗಿತ್ತೆಂದರೆ, ಅನಿತಾ ಅವರು ತ್ಯಾಜ್ಯ ಆಯುವುದನ್ನು ಒಂದು ಆಯ್ಕೆಯಾಗಿ ಪರಿಗಣಿಸಲಿಲ್ಲ.

ಅದೃಷ್ಟವಶಾತ್, ಕೆಕೆಪಿಕೆಪಿ ನಗರದಲ್ಲಿ ತ್ಯಾಜ್ಯ ನಿರ್ವಹಣೆಯನ್ನು ಮಾತ್ರವಲ್ಲದೇ, ತ್ಯಾಜ್ಯ ಆಯುವವರ ಕೆಲಸದ ಪರಿಸ್ಥಿತಿಗಳನ್ನು ಗಣನೀಯವಾಗಿ ಸುಧಾರಿಸುವ ಬದಲಾವಣೆಗಳಿಗೆ ಸೂಕ್ತ ವೇದಿಕೆಯನ್ನು ಸಿದ್ಧಪಡಿಸಿತು. 1993ರಲ್ಲಿ ವೇದಿಕೆ ಸಿದ್ಧವಾದ ನಂತರ ಕೆಕೆಪಿಕೆಪಿಯೂ ತ್ಯಾಜ್ಯ ಆಯುವವರ ಕೊಡುಗೆಗಳನ್ನು ಪ್ರಮಾಣೀಕರಿಸುವ ಸೂಕ್ತ ಅಧ್ಯಯನವನ್ನು ನಡೆಸಿ, ತ್ಯಾಜ್ಯ ಆಯುವವರು ನಗರಕ್ಕೆ ಅಪಾರ ಪ್ರಮಾಣದ ಹಣವನ್ನು ಉಳಿಸುತ್ತಾರೆ ಎಂದು ಸಂಶೋಧನೆಯ ಮೂಲಕ ತೋರಿಸಿತು. ಪ್ರತಿ ತಿಂಗಳು ಪ್ರತಿಯೊರ್ವ ತ್ಯಾಜ್ಯ ಆಯುವ ಕಾರ್ಮಿಕ USD 5 ಮೌಲ್ಯದ ಕೆಲಸವನ್ನು ಉಚಿತವಾಗಿ ಮಾಡುತ್ತಿದ್ದು, ಇದರಿಂದ ವಾರ್ಷಿಕವಾಗಿ ತ್ಯಾಜ್ಯ ಸಾಗಾಣಿಕೆಗಾಗಿಯೇ ಮಾಡಲಾಗುತ್ತಿದ್ದ USD 316,455 ಹಣ ಉಳಿತಾಯವಾಗುತ್ತಿದೆ. ತಮ್ಮ ಕೆಲಸಕ್ಕೆ ಯಾವುದೇ ಮಾನ್ಯತೆ ಇಲ್ಲದಿದ್ದರೂ, ಸರ್ಕಾರದಿಂದ ಸಣ್ಣ ಬೆಂಬಲವಿಲ್ಲದಿದ್ದರೂ ತ್ಯಾಜ್ಯ ಆಯುವವರು ಮಾತ್ರ ಇದೆಲ್ಲವನ್ನು ಮಾಡುತ್ತಿದ್ದಾರೆ. ಇದಲ್ಲದೇ, ತ್ಯಾಜ್ಯ ಆಯುವವರು ವಾರ್ಷಿಕವಾಗಿ ಸುಮಾರು 118,000 ಟನ್ನಗಳಷ್ಟು ಮರುಬಳಕೆ ಮಾಡಬಹುದಾದ ವಸ್ತುಗಳು ಲ್ಯಾಂಡ್ ಫಿಲ್‌ಗೆ ಹೋಗುವುದನ್ನು ತಡೆದು, ಬೇರೆಡೆಗೆ ಸಾಗಿಸಿದರು.

ಕೆಕೆಪಿಕೆಪಿಯು ಪುಣೆ ನಗರಕ್ಕೆ ಉತ್ತಮ ತ್ಯಾಜ್ಯ ನಿರ್ವಹಣೆ ಸೇವೆಗಳನ್ನು ಒದಗಿಸಲು, ತ್ಯಾಜ್ಯ ಆಯುವ ಮತ್ತು ಸಂಚಾರಿ ತ್ಯಾಜ್ಯ ಖರೀದಿದಾರರನ್ನು ಸಂಪೂರ್ಣ ಕಾರ್ಮಿಕರ ಸ್ವಾಯತ್ತ ಸಹಕಾರಿ ಸಂಸ್ಥೆಯ ಮೂಲಕ ತ್ಯಾಜ್ಯ ಆಯುವವರನ್ನು ಏಕೀಕರಣಗೊಳಿಸಿ, ಸಾಂಸ್ಥಿಕ ರೂಪ ನೀಡಲು, ಈ ಅಧ್ಯಯನವನ್ನು ಪುಣೆ ಮಹಾನಗರ ಪಾಲಿಕೆಗೆ ಮನವರಿಕೆ ಮಾಡಲು ಮತ್ತು ಸಮರ್ಥಿಸುವ ಸಾಧನವಾಗಿ ಬಳಸಿಕೊಂಡಿತು. ನಂತರ ಆ ಸಹಕಾರಿ ಸಂಸ್ಥೆಯನ್ನು 'ಸ್ವಚ್' ಎಂದು ನೋಂದಾಯಿಸಲಾಯಿತು. ಸ್ವಚ್ ಸಂಸ್ಥೆಯು ಎರಡು ಪ್ರಮುಖ ಧ್ಯೇಯಗಳನ್ನು ಹೊಂದಿದೆ. 1. ತ್ಯಾಜ್ಯ ನಿರ್ವಹಣಾ ನಿಯಮಗಳಿಗೆ ಅನುಗುಣವಾಗಿ ಉತ್ತಮ ದೈನಂದಿನ ತ್ಯಾಜ್ಯ ಸಂಗ್ರಹ ಸೇವೆಗಳನ್ನು ಒದಗಿಸುವುದು. ಮತ್ತು 2. ತ್ಯಾಜ್ಯ ಆಯುವವರನ್ನು ರಕ್ಷಿಸಿ ಅವರ ಜೀವನೋವನ್ನು ಉನ್ನತೀಕರಿಸುವುದು.

**ಸುಧಾರಿತ ತ್ಯಾಜ್ಯ ನಿರ್ವಹಣೆ :**
ಸ್ವಚ್ ಸಂಸ್ಥೆಯು ನಗರಕ್ಕೆ ಒದಗಿಸುವ ಪ್ರಮುಖ ಸೇವೆಯೆಂದರೆ ಮನೆ-ಮನೆಗೆ ತೆರಳಿ ತ್ಯಾಜ್ಯ ಸಂಗ್ರಹಣೆ ಮಾಡುವುದು. ಇದಕ್ಕಾಗಿ ಪ್ರತಿ ಮನೆಗೆ ತಿಂಗಳಿಗೆ 70ರೂ.ಗಳ ಬಳಕೆದಾರರ ಶುಲ್ಕ ವಿಧಿಸಿ ಮನೆಗಳು ಹಾಗೂ ಸಂಸ್ಥೆಗಳಿಂದ ತ್ಯಾಜ್ಯವನ್ನು ಸಂಗ್ರಹಿಸಲು ಸ್ವಚ್ ಸಂಸ್ಥೆಯು ಪಿಎಂಸಿಯೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದೆ. ಆದರೆ ಈ ಮೊತ್ತವು ಅನನುಕೂಲಕರ ಕುಟುಂಬಗಳಿಗೆ ಹೊರೆಯಾಗಿದೆ. ಹೀಗಾಗಿ ಅನನುಕೂಲಕರ ಸಮುದಾಯಗಳಿಗೆ ವಿಧಿಸುವ ಬಳಕೆದಾರರ ಶುಲ್ಕಕ್ಕೆ ಪಿಎಂಸಿ ಸಬ್ಸಿಡಿ ನೀಡುತ್ತದೆ. ಈ ಸಮುದಾಯಗಳಲ್ಲಿ, ತ್ಯಾಜ್ಯ ಆಯುವವರು ಪ್ರತಿ ಮನೆಗೆ ಕೇವಲ 50ರೂ.ಗಳ ಬಳಕೆದಾರರ ಶುಲ್ಕವನ್ನು ಮಾತ್ರ ವಿಧಿಸುತ್ತಾರೆ. ಆದರೆ ಸೇವಾ ನಿಬಂಧನೆಯಲ್ಲಿ ಸಮಾನತೆಯನ್ನು ಖಚಿತಪಡಿಸಿಕೊಳ್ಳಲು, ಉಳಿದ ಸಬ್ಸಿಡಿ ಬಾಕಿ ಹಣವನ್ನು ಪ್ರತಿ ತಿಂಗಳ ಕೊನೆಯಲ್ಲಿ, ಪಿಎಂಸಿಯಿಂದ ಸಂಗ್ರಹಿಸುತ್ತಾರೆ.

"ಮೂಲಭೂತವಾಗಿ, ತ್ಯಾಜ್ಯ ಆಯುವವರು ತಮ್ಮ ತ್ಯಾಜ್ಯ ಸಂಗ್ರಹಣೆ ಸೇವೆಯಿಂದ ನ್ಯಾಯಯುತ ಪ್ರಮಾಣದ ಆದಾಯವನ್ನು ಸಂಗ್ರಹಿಸಲು ಸಮರ್ಥರಾಗಿದ್ದಾರೆ. ಅನನುಕೂಲಕರ ಕುಟುಂಬಗಳಿಗೆ ತಮ್ಮ ಸಾಮರ್ಥ್ಯಕ್ಕಿಂತ ಹೆಚ್ಚು ಪಾವತಿಸಲು ಈ ಶುಲ್ಕ ಹೊರೆಯಾಗುವುದಿಲ್ಲ ಎಂದು ಕೆಕೆಪಿಕೆಪಿ ಸದಸ್ಯೆ ಲುಬ್ನಾ ಅನಂತಕೃಷ್ಣನ್ ಅಭಿಪ್ರಾಯಪಟ್ಟಿದ್ದಾರೆ.

ಸ್ವಚ್ ಸಂಸ್ಥೆಯು ರೂಪಿಸಿರುವ ತ್ಯಾಜ್ಯ ನಿರ್ವಹಣೆ ಮಾದರಿಗಳ ಅಡಿಯಲ್ಲಿ, ಮನೆಗಳಲ್ಲಿ ತ್ಯಾಜ್ಯವನ್ನು ಮೂರು ಪ್ರತ್ಯೇಕ ವಿಭಾಗಗಳಾಗಿ ಸಂಗ್ರಹಿಸಬೇಕಾಗುತ್ತದೆ. ಹಸಿ, ಒಣ ಮತ್ತು ನೈರ್ಮಲ್ಯ ತ್ಯಾಜ್ಯಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಬೇಕು. ನೈರ್ಮಲ್ಯ ತ್ಯಾಜ್ಯವನ್ನು ಇತ್ತೀಚೆಗೆ ಸೇರ್ಪಡೆ ಮಾಡಲಾಗಿದೆ. ಪ್ರತಿದಿನ ಸುಮಾರು 20 ಮೆಟ್ರಿಕ್ ಟನ್‌ಗಳಷ್ಟು ಮನೆಯ ನೈರ್ಮಲ್ಯ ತ್ಯಾಜ್ಯವನ್ನು, ತ್ಯಾಜ್ಯ ಆಯುವವರು ನಿರ್ವಹಿಸುತ್ತಿದ್ದಾರೆ. ಹೆಚ್ಚುತ್ತಿರುವ ಈ ನೈರ್ಮಲ್ಯ ತ್ಯಾಜ್ಯವನ್ನು ನಿರ್ವಹಿಸಲು ತ್ಯಾಜ್ಯ ಆಯುವವರು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ರೆಡ್ ಡಾಟ್ (ಕೆಂಪು ಚುಕ್ಕಿ) ಅಭಿಯಾನವನ್ನು ಸ್ವಚ್ ಸಂಸ್ಥೆಯು 2017ರಲ್ಲಿ ಪ್ರಾರಂಭಿಸಿತು. ಈ ಅಭಿಯಾನವು ಮಹಿಳೆಯರು ತಮ್ಮ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಪತ್ರಿಕೆಯಲ್ಲಿ ಸುತ್ತುವಂತೆ ಮತ್ತು ಅದರ ಮೇಲೆ ಕೆಂಪು ಚುಕ್ಕೆ ಹಾಕಲು ಉತ್ತೇಜಿಸಿತು. ಇದರಿಂದ ತ್ಯಾಜ್ಯ ಆಯುವವರಿಗೆ ಇದು ನೈರ್ಮಲ್ಯ ತ್ಯಾಜ್ಯ ಎಂದು ತಿಳಿಯುತ್ತದೆ. ಆರೋಗ್ಯ ಮತ್ತು ನೈರ್ಮಲ್ಯ ಸಂಬಂಧಿತ ಸಮಸ್ಯೆಗಳಿಂದಾಗಿ ನೈರ್ಮಲ್ಯ ತ್ಯಾಜ್ಯವನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗುತ್ತದೆ. ಇದು ತ್ಯಾಜ್ಯ ಆಯುವವರ ಘನತೆ ಮತ್ತು ಆರೋಗ್ಯವನ್ನು ಕಾಪಾಡುವುದರೊಂದಿಗೆ ನೈರ್ಮಲ್ಯ ತ್ಯಾಜ್ಯವನ್ನು ಪ್ರತ್ಯೇಕವಾಗಿ ನಿರ್ವಹಿಸಲು ನೆರವಾಗುತ್ತದೆ ಎಂದು ಲುಬ್ನಾ ವಿವರಿಸಿದರು.

ತ್ಯಾಜ್ಯ ಆಯುವವರು ತಾವು ಸಂಗ್ರಹಿಸಿರುವ ತ್ಯಾಜ್ಯದಲ್ಲಿರುವ ಒಣ ತ್ಯಾಜ್ಯವನ್ನು ವಿಂಗಡಿಸಿ, ಅದರಲ್ಲಿರುವ ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಸ್ಕ್ರ್ಯಾಪ್ ಅಂಗಡಿಗಳಿಗೆ ಮಾರಾಟ ಮಾಡುತ್ತಾರೆ. ಇದರಲ್ಲಿ ಕೆಲವರು ಒಟ್ಟಾಗಿ ಸಂಗ್ರಹಿಸುತ್ತಾರೆ ಮತ್ತು ನಿರ್ವಹಣೆ ಮಾಡುತ್ತಾರೆ. ಇನ್ನು ಉಳಿದಿರುವ ಅಥವಾ ಮರುಬಳಕೆ ಮಾಡಲಾಗದ ಒಣ ತ್ಯಾಜ್ಯವನ್ನು ನೆಲಭರ್ತಿಗಳಲ್ಲಿ ವಿಲೇವಾರಿ ಮಾಡಲು ನಗರ ತ್ಯಾಜ್ಯ ಸಾರಿಗೆ ವ್ಯವಸ್ಥೆಗೆ ವರ್ಗಾಯಿಸಲಾಗುತ್ತದೆ.

ಲುಬ್ನಾ ಅವರ ಪ್ರಕಾರ, 1990ರ ದಶಕದ ಮಧ್ಯಭಾಗದಲ್ಲಿ ತ್ಯಾಜ್ಯ ಆಯುವವರ ಸಹಕಾರಿ ಸ್ಕ್ರ್ಯಾಪ್ ಅಂಗಡಿಗಳನ್ನು ಪ್ರಾರಂಭಿಸಲಾಯಿತು. ಅವುಗಳನ್ನು ಪ್ರಾರಂಭಿಸುವುದರ ಹಿಂದಿರುವ ಮುಖ್ಯ ಕಾರಣವೆಂದರೆ, ವಸ್ತುಗಳನ್ನು ಸರಿಯಾಗಿ ತೂಕ ಮಾಡದೇ, ಅವುಗಳಿಗೆ ಸೂಕ್ತ ಬೆಲೆ ನೀಡದೇ ಸಣ್ಣ ತ್ಯಾಜ್ಯ ವ್ಯಾಪಾರಿಗಳು, ತ್ಯಾಜ್ಯ ಆಯುವವರನ್ನು ಶೋಷಣೆ ಮಾಡುತ್ತಿದ್ದರು. ಸ್ಕ್ರ್ಯಾಪ್ ವಿತರಕರು ಎಷ್ಟು ಲಾಭ ಗಳಿಸುತ್ತಿದ್ದಾರೆ, ಅದರಲ್ಲಿ ತಮಗೆ ಎಷ್ಟು ನೀಡುತ್ತಿದ್ದಾರೆ ಎಂಬುದರ ಬಗ್ಗೆ ಸಾಮಾನ್ಯವಾಗಿ ತ್ಯಾಜ್ಯ ಆಯುವವರಿಗೆ ತಿಳಿದಿರುವುದಿಲ್ಲ. ಇನ್ನು ಲುಬ್ನಾ ಅವರು, "ತ್ಯಾಜ್ಯ ಆಯುವವರನ್ನು ಶೋಷಣೆ ಮಾಡದೇ, ನ್ಯಾಯಯುತ ವ್ಯಾಪಾರ ಮಾರ್ಗದ ಮೂಲಕ ಸ್ಕ್ರ್ಯಾಪ್ ವಿತರಕರು ತಮ್ಮ ಅಂಗಡಿಗಳನ್ನು ಲಾಭದಾಯಕವಾಗಿ ನಡೆಸಬಹುದು ಎಂದು ಸಾಬೀತುಪಡಿಸಲು ನಾವು ಬಯಸಿದ್ದೇವೆ" ಎಂದಿದ್ದಾರೆ.

ಪುಣೆಯಲ್ಲಿರುವ ಮೂರು ಸಹಕಾರಿ ಸ್ಕ್ರ್ಯಾಪ್ ಅಂಗಡಿಗಳ ಮಾಲೀಕತ್ವ, ನಿರ್ವಹಣೆ ಮತ್ತು ಮುನ್ನಡೆಸುವ ಜವಾಬ್ದಾರಿಯನ್ನು ತ್ಯಾಜ್ಯ ಆಯುವವರು ನಿರ್ವಹಿಸುತ್ತಿದ್ದಾರೆ. ಪ್ರತಿ ಅಂಗಡಿಯು 40 ರಿಂದ 100 ತ್ಯಾಜ್ಯ ಆಯುವ ಕಾರ್ಮಿಕರನ್ನು ಒಳಗೊಂಡಿದೆ. ಈ ಅಂಗಡಿಯಲ್ಲಿ ಅವರೆಲ್ಲರೂ ಸಮಾನ ಷೇರುದಾರರಾಗಿದ್ದು, ನಿರ್ಧಾರ ತೆಗೆದುಕೊಳ್ಳುವ ಹಕ್ಕುಗಳನ್ನು ಮತ್ತು ಲಾಭಾಂಶದಲ್ಲಿ ಸಮಾನ ಪಾಲನ್ನು ಹೊಂದಿದ್ದಾರೆ. ಇನ್ನು ಕಾರ್ಯಾಚರಣೆಯ ನಿಯಮಗಳು, ಲಾಭಾಂಶದ ಪಾಲು ಮತ್ತು ಹೂಡಿಕೆ ಸೇರಿದಂತೆ ಎಲ್ಲ ನಿರ್ಣಯಗಳು ಅದರ ಮಾಲೀಕತ್ವ ಹೊಂದಿರುವ ತ್ಯಾಜ್ಯ ಆಯುವ ಕಾರ್ಮಿಕರು ಮಾಡುವ ನಿರ್ಣಯಗಳನ್ನು ಅವಲಂಬಿಸಿ ಬದಲಾಗುತ್ತವೆ.

ದೇಶದ ಘನತ್ಯಾಜ್ಯ ನಿರ್ವಹಣಾ ನಿಯಮ 2016ರ ಪ್ರಕಾರ, ಇನ್ನು ಮುಂದೆ ಮುನ್ಸಿಪಲ್ ಕಾರ್ಪೊರೇಷನ್ಗಳು ಹಸಿ ತ್ಯಾಜ್ಯವನ್ನು ನೆಲಭರ್ತಿಗೆ ಕಳುಹಿಸಲು ಸಾಧ್ಯವಿರುವುದಿಲ್ಲ. ಹೀಗಾಗಿ ಸ್ವಚ್ ಸಂಸ್ಥೆಯ ತ್ಯಾಜ್ಯ ಆಯುವವರು, ವಸತಿ ಹಾಗೂ ವಾಣಿಜ್ಯ ಸ್ಥಳಗಳಲ್ಲಿ ಗೊಬ್ಬರ ತಯಾರಿಸಲು ಮೂಲಸೌಕರ್ಯಗಳನ್ನು ( ಕೋಕೋ ಪಿಟ್‌ಗಳು/ ಫೈಬರ್-ಬಲವರ್ಧಿತ ಪಾಲಿಮರ್ ಬಿನ್‌ಗಳು / ಬಯೋಡೈಜೆಸ್ಟರ್‌ಗಳು) ಸ್ಥಾಪಿಸಲು ತಮ್ಮ ಪರಿಣಿತಿ ಹಾಗೂ ಅಗತ್ಯವಿರುವ ವಸ್ತುಗಳನ್ನು ಒದಗಿಸುವ ಮೂಲಕ ಮೂಲದಲ್ಲೇ ತ್ಯಾಜ್ಯವನ್ನು ಗೊಬ್ಬರವಾಗಿಸುತ್ತಾರೆ. ಇದರೊಂದಿಗೆ ಕಾಂಪೋಸ್ಟರ್‌ಗಳಿಗೆ ಕೋಕೋ ಪೀಟ್, ಇತರ ಸುರಕ್ಷತಾ ವಸ್ತುಗಳನ್ನು ಸಹ ಒದಗಿಸುತ್ತಾರೆ ಮತ್ತು ಗೊಬ್ಬರ ತಯಾರಿಸುವ ಘಟಕವನ್ನು ನಿರ್ವಹಿಸುತ್ತಾರೆ.

### ಉತ್ತಮ ಆದಾಯ, ಮತ್ತು ಕೆಲಸದ ಪರಿಸ್ಥಿತಿಗಳಲ್ಲಿ ಸುಧಾರಣೆ :

ಸ್ವಚ್ ಸಂಸ್ಥೆಯ ಸ್ಥಾಪನೆಯ ನಂತರ ತ್ಯಾಜ್ಯ ಆಯುವವರ ಕೆಲಸದ ಪರಿಸ್ಥಿತಿಗಳು ಗಣನೀಯವಾಗಿ ಸುಧಾರಿಸಿವೆ. ಈ ಹಿಂದೆ ತ್ಯಾಜ್ಯ ಆಯುವವರು ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಸಂಗ್ರಹಿಸಲು ಬೀದಿಗಳಲ್ಲಿ ಬಿದ್ದಿರುವ ತ್ಯಾಜ್ಯವನ್ನು ಜಾಲಾಡಬೇಕಿತ್ತು, ನೆಲಭರ್ತಿಗಳಲ್ಲಿರುವ ಕಸದ ರಾಶಿಯಲ್ಲಿ ತಡಕಾಡಬೇಕಿತ್ತು. ಇದರಿಂದಾಗಿ ತ್ಯಾಜ್ಯ ಆಯುವವರು ಆರೋಗ್ಯ ಸಮಸ್ಯೆಗಳು ಸೇರಿದಂತೆ ಅನೇಕ ತೊಂದರೆಗಳಿಗೆ ತಮ್ಮನ್ನು ತಾವೇ ಒಡ್ಡಿಕೊಳ್ಳುತ್ತಿದ್ದರು. ಆದರೆ ಇಂದು ತ್ಯಾಜ್ಯ ಆಯುವವರು ಉತ್ಪಾದನೆಯ ಹಂತದಲ್ಲಿಯೇ ಬೇರ್ಪಡಿಸಿದ ತ್ಯಾಜ್ಯವನ್ನು ಸಂಗ್ರಹಿಸುತ್ತಿದ್ದಾರೆ.

ಈ ವ್ಯವಸ್ಥೆಯಲ್ಲಿ ತ್ಯಾಜ್ಯವನ್ನು ಆಯುವವರು ಉತ್ತಮ ಆದಾಯವನ್ನು ಸಂಪಾದಿಸುತ್ತಿದ್ದಾರೆ. ಅವರು ಎರಡು ಪ್ರಮುಖ

[3] Chikarmane, P., M. Deshpande, and L. Narayan. 2001. Report on Scrap Collectors, Scrap Traders and Recycling Enterprises in Pune. Geneva: ILO-UNDP

[4] Poornima Chikarmane. July 2012. Integrating Waste Pickers into Municipal Solid Waste Management in Pune, India. WIEGO Policy Brief (Urban Policies) No 8 July 2012

[5] Housing communities

[6] https://swachcoop.com/initiatives/red-dot-awareness/



©AMIT THAVARAJ FOR KKPKP




ಆದಾಯದ ಮೂಲಗಳನ್ನು ಹೊಂದಿದ್ದಾರೆ. ಅವುಗಳೆಂದರೆ, ಮನೆಗಳಿಂದ ಸಂಗ್ರಹಿಸುವ ಬಳಕೆದಾರ ಶುಲ್ಕ ಮತ್ತು ಮರುಬಳಕೆ ಮಾಡಬಹುದಾದ ವಸ್ತುಗಳ ಮಾರಾಟದ ಜೊತೆಗೆ ತಮ್ಮ ಸಹಕಾರಿ ಸ್ಕ್ರ್ಯಾಪ್ ಅಂಗಡಿಗಳಿಂದ ಬರುವ ಲಾಭ ಹಂಚಿಕೆಯ ಮೂಲಕವು ಆದಾಯ ಸಂಪಾದಿಸುತ್ತಾರೆ.

ಅನಿತಾ ಅವರು ಹೇಳುವಂತೆ, ಈ ಮೊದಲು ಅವರ ಮನೆಯ ಖರ್ಚಿನ ಬಗ್ಗೆಯೂ ಸ್ವಂತ ನಿರ್ಧಾರ ತೆಗೆದುಕೊಳ್ಳಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. “ಚಿಕನ್ ಖರೀದಿಸಬಹುದೇ? ಎಷ್ಟು ಚಿಕನ್ ಅನ್ನು ಅಡುಗೆಗೆ ಬಳಸಬೇಕು? ಹೀಗೆ ಎಲ್ಲವನ್ನೂ ನನ್ನ ಅತ್ತೆಗೆ ಕೇಳಬೇಕಾಗಿತ್ತು” ಎಂದು ಅವರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.

ಆದರೆ ಆಕೆ ಇಂದು ತನ್ನ ಸ್ವಂತ ಆದಾಯದಿಂದ ಯಾರನ್ನೂ ಕೇಳದೇ, ತನ್ನ ಮನೆಗೆ ಅಗತ್ಯ ವಸ್ತುಗಳನ್ನು ಖರೀದಿಸಲು ಶಕ್ತಳಾಗಿದ್ದಾಳೆ.

"ಇಂದು ನಾನು ನನ್ನ ಸ್ವಂತ ಶ್ರಮದಿಂದ ಹಣವನ್ನು ಸಂಪಾದಿಸುತ್ತಿದ್ದೇನೆ. ನಾನು ಅದನ್ನು ಹೇಗೆ ಖರ್ಚು ಮಾಡುತ್ತೇನೆ ಎಂಬುದರ ಮೇಲೆ ನನಗೆ ನಿಯಂತ್ರಣವಿದೆ. ನಾನು ಯಾರ ಮೇಲೂ ಅವಲಂಬಿತಳಾಗಿಲ್ಲ” ಎಂದು ಹೇಳುತ್ತಾ ಮುಗುಳ್ನಕ್ಕಳು.

ಈಗ ನಾಗರಿಕರು ತ್ಯಾಜ್ಯವನ್ನು ಆಯುವವರನ್ನು ಸಹ ಗೌರವದಿಂದ ಕಾಣುತ್ತಾರೆ ; ವಿಶೇಷವಾಗಿ ಕೋವಿಡ್ ಸಾಂಕ್ರಾಮಿಕ ರೋಗದ ನಂತರ, ಜನರು ತಮ್ಮ ಸುತ್ತಮುತ್ತಲಿನ ಶುಚಿತ್ವವನ್ನು ಕಾಪಾಡುವಲ್ಲಿ ತ್ಯಾಜ್ಯ ಆಯುವವರ ಮಹತ್ವವನ್ನು ಅರಿತುಕೊಂಡಿದ್ದಾರೆ. ಈ ಹಿಂದೆ ತ್ಯಾಜ್ಯ ಆಯುವವರನ್ನು ಯಾರೂ ಗುರುತಿಸುತ್ತಿರಲಿಲ್ಲ ಮತ್ತು ಅವರನ್ನು ಕನಿಷ್ಠವಾಗಿ ಕಾಣುತ್ತಿದ್ದರು. ಇಂದು, ತ್ಯಾಜ್ಯ ಆಯುವವರು ತಮ್ಮ ಕೆಲಸದಿಂದ ಗುರುತಿಸಲ್ಪಟ್ಟಿದ್ದಾರೆ ಮತ್ತು ಅರ್ಹವಾದ ಗೌರವವನ್ನು ಪಡೆಯುತ್ತಿದ್ದಾರೆ. ನಾಗರಿಕರು ಈಗ ತ್ಯಾಜ್ಯ ಆಯುವವರನ್ನು, ”ನೀವು ಹೇಗಿದ್ದೀರಿ? ನೀವು ಚೆನ್ನಾಗಿದ್ದೀರಾ? ಎಂದು ಕೇಳುತ್ತಾರೆ. ಕೆಲವೊಮ್ಮೆ ನಾಗರಿಕರು “ನನಗೆ ಅನೇಕ ಉಡುಗೊರೆಗಳನ್ನು ಸಹ ನೀಡುತ್ತಾರೆ” ಎಂದು ಅನಿತಾ ಹೆಮ್ಮೆ ಪಡುತ್ತಾರೆ.

ಆದರೆ ತ್ಯಾಜ್ಯ ಆಯುವುದರಿಂದ ಸಿಗುವ ಸ್ವತಂತ್ರ ಮತ್ತು ಸ್ವಾಯತ್ತತೆಯನ್ನು ಅನಿತಾ ಮತ್ತು ಅವರ ಸಹವರ್ತಿ ತ್ಯಾಜ್ಯ ಆಯುವವರು ಆನಂದಿಸುತ್ತಿದ್ದಾರೆ.

2012ರ ಅಂಕಿಅಂಶಗಳ ಪ್ರಕಾರ, ತ್ಯಾಜ್ಯ ಆಯುವವರಲ್ಲಿ ಶೇ.90ರಷ್ಟು ಮಹಿಳೆಯರಾಗಿದ್ದು, ಅವರಲ್ಲಿ ಶೇ.90ರಷ್ಟು ಮಹಿಳೆಯರು ಅನಕ್ಷರಸ್ಥರಾಗಿದ್ದರೆ, ಶೇ.50ರಷ್ಟು ತ್ಯಾಜ್ಯ ಆಯುವವರು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರು. ಅವರಲ್ಲಿ ಅನೇಕ ಮಹಿಳೆಯರು ಮನೆಯಲ್ಲಿ ದೊಡ್ಡ ಜವಾಬ್ದಾರಿಗಳನ್ನು ಹೊಂದಿರುವ ತಾಯಂದಿರಾಗಿದ್ದು, ಅವರು ಎಂಟು ಗಂಟೆಗಳ ಸುದೀರ್ಘ ಕೆಲಸದ ದಿನಗಳನ್ನು ನಿರ್ವಹಣೆ ಮಾಡಲು ಸಾಧ್ಯವಿಲ್ಲ. ಆದರೆ ತ್ಯಾಜ್ಯವನ್ನು ಆಯುವುದಕ್ಕೆ ಯಾವುದೇ ಸಮಯದ ಮಿತಿ ಇಲ್ಲದಿರುವುದರಿಂದ, ಅವರೇ ಸಮಯವನ್ನು ನಿರ್ಧರಿಸಬಹುದು. ಹೀಗಾಗಿ ದಿನದ ಯಾವುದೇ ಸಮಯದಲ್ಲಾದರೂ ಅವರು ಕೆಲಸ ಮಾಡಬಹುದು.

“ನನಗೆ ನಾನೇ ಯಜಮಾನಿ. ನನ್ನ ಸ್ವಂತ ನಿರ್ಧಾರಗಳನ್ನು ನಾನೇ ತೆಗೆದುಕೊಳ್ಳುತ್ತೇನೆ. ಕೆಲಸ ಮಾಡುವುದರಿಂದ ಸಿಗುವ ಸ್ವತಂತ್ರವನ್ನು ನಾನು ಯಾವುದಕ್ಕೂ ಬದಲಾಯಿಸಿಕೊಳ್ಳುವುದಿಲ್ಲ” ಎಂದು ಅನಿತಾ ಹೆಮ್ಮೆಯಿಂದ ಹೇಳುತ್ತಾರೆ.

ಅಂತಿಮವಾಗಿ, ಈಗ ತ್ಯಾಜ್ಯ ಆಯುವವರು ಗಟ್ಟಿಯಾದ ಧ್ವನಿಯನ್ನು ಹೊಂದಿದ್ದಾರೆ. ಅವರು ತಮ್ಮ ಸಹಕಾರಿ ಸಂಸ್ಥೆಗಳ ನಿರ್ವಹಣೆ, ಅವರಿಗೆ ಸಂಬಂಧಿಸಿದ ನೀತಿಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಅವರು ಸಲಹೆ ಪಡೆಯುವ ಹಕ್ಕನ್ನು ಪ್ರತಿಪಾದಿಸುತ್ತಾರೆ. ಇದೆಲ್ಲದರ ಹೊರತಾಗಿ ಅವರು ಪರಿಸರವಾದಿಗಳು ಹಾಗೂ ತ್ಯಾಜ್ಯ ನಿರ್ವಹಣೆಯಲ್ಲಿ ತಜ್ಞರಾಗಿದ್ದು, ಪರಿಸರ ಮತ್ತು ಮಾನವನ ಆರೋಗ್ಯದ ಮೇಲೆ ಪ್ಲಾಸ್ಟಿಕ್‌ನಂತಹ ಸಮಸ್ಯಾತ್ಮಕ ವಸ್ತುಗಳು ಉಂಟು ಮಾಡುತ್ತಿರುವ ಪರಿಣಾಮಗಳು ಮತ್ತು ಅವುಗಳ ಮೇಲೆ ನಿಷೇಧ ಹಾಗೂ ನಿಬಂಧನೆಗಳನ್ನು ವಿಧಿಸುವುದರಿಂದ ಅವರ ಜೀವನೋಪಾಯದ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ಬೇರೆಯವರಿಗಿಂತ ಅವರು ಹೆಚ್ಚು ಅರ್ಥಮಾಡಿಕೊಳ್ಳುತ್ತಾರೆ. ಆದ್ದರಿಂದ ಯಾರನ್ನು ಸಂಪರ್ಕಿಸುವುದು ಉತ್ತಮ..?

ದುರದೃಷ್ಟವಶಾತ್, ಎಲ್ಲಾ ತ್ಯಾಜ್ಯ ಆಯುವವರು ಸ್ವಚ್ ಸಂಸ್ಥೆಯ ಭಾಗವಾಗಿರುವುದಿಲ್ಲ. ಇತರ ತ್ಯಾಜ್ಯ ಆಯುವವರು, ಉದಾಹರಣೆಗೆ ನೆಲಭರ್ತಿಗಳಲ್ಲಿ ಕೆಲಸ ಮಾಡುವಂತಹ ತ್ಯಾಜ್ಯ ಆಯುವವರನ್ನು ಕೂಡಾ ವ್ಯವಸ್ಥೆಯೊಳಗೆ ಸಂಯೋಜಿಸಲ್ಪಡಬೇಕೆಂದು ಅನಿತಾ ಬಯಸುತ್ತಾರೆ.

ನೆಲಭರ್ತಿಗಳಲ್ಲಿರುವ ತ್ಯಾಜ್ಯ ಆಯುವವರನ್ನು ಈ ವ್ಯವಸ್ಥೆಯೊಳಗೆ ದಾಖಲಿಸಬೇಕು ಎಂದು ನಾನು ಭಾವಿಸುತ್ತೇನೆ. ಈ ಸಂಸ್ಥೆಗೆ ಸೇರದಿರುವ ತ್ಯಾಜ್ಯ ಆಯುವವರು ಕಿಲೋಮೀಟರ್ ಗಟ್ಟಲೆ ನಡೆದು ತ್ಯಾಜ್ಯ ಸಂಗ್ರಹಿಸುತ್ತಾರೆ. ಆದರೆ ಇಲ್ಲಿ (ವ್ಯವಸ್ಥೆಯೊಳಗೆ) ಜನರು ಮನೆಗಳಿಂದ ತ್ಯಾಜ್ಯವನ್ನು ತರುತ್ತಾರೆ. ಹೀಗಾಗಿ ಸಂಸ್ಥೆಯ ಭಾಗವಾಗಿ ಕೆಲಸ ಮಾಡಲು ನಮಗೆ ಸುಲಭವಾಗಿದೆ.

### ಹೆಚ್ಚಿನ ಪರಿವರ್ತನೆಗಳ ಅಗತ್ಯವಿದೆ:

ವಾಸ್ತವವಾಗಿ, ಸ್ವಚ್ ಸಂಸ್ಥೆಯ ತ್ಯಾಜ್ಯ ಆಯುವವರ ಪರಿಸ್ಥಿತಿ ಸಹಕಾರಿ ಸಂಸ್ಥೆಯ ಸ್ಥಾಪನೆಗೂ ಮುನ್ನ ಇದ್ದ ಪರಿಸ್ಥಿತಿಗಿಂತ ಈಗ ಬಹಳಷ್ಟು ಸುಧಾರಿಸಿದೆ. ಎಷ್ಟರಮಟ್ಟಿಗೆ ಎಂದರೆ ಅವರಲ್ಲಿ ಅನೇಕರು ಸಂತೋಷದ ಜೊತೆಗೆ, ತಮ್ಮ ವೃತ್ತಿಯ ಬಗ್ಗೆ ಹೆಮ್ಮೆಪಡುತ್ತಾರೆ.

ಅದೇನೇ ಇದ್ದರೂ, ಸವಾಲುಗಳು ಇನ್ನೂ ಉಳಿದಿವೆ : ಸಾಮಾಜಿಕ ಕಲ್ಯಾಣ ಯೋಜನೆಗಳ ಪ್ರಯೋಜನವನ್ನು ಒದಗಿಸುವ ಸರ್ಕಾರ ನೀಡಿರುವ ಭರವಸೆ ಇನ್ನೂ ಸಂಪೂರ್ಣವಾಗಿ ಈಡೇರಿಲ್ಲ. ಮುಖ್ಯವಾಗಿ ಸೂಕ್ತ ವೈದ್ಯಕೀಯ ಬೆಂಬಲ ಮತ್ತು ಪಿಂಚಣಿ ನೀಡುವ ಭರವಸೆ ಇನ್ನೂ ಭರವಸೆಯಾಗಿಯೇ ಉಳಿದಿವೆ.

ವೈದ್ಯಕೀಯ ವೆಚ್ಚಗಳು ದೊರೆಯುತ್ತಿಲ್ಲ. ಇದು ನಮಗೆ ದೊಡ್ಡ ಹೊರೆಯಾಗಿದೆ. ನಾವು ಮುಂಗಡ ಹಣ ಪಾವತಿಸುವವರೆಗೆ ನಮಗೆ ವೈದ್ಯರ ಬಳಿಗೆ ಹೋಗಲು ಸಾಧ್ಯವಾಗುವುದಿಲ್ಲ” ಎಂದು ಅನಿತಾ ಅಸಮಾಧಾನ ವ್ಯಕ್ತಪಡಿಸಿದರು.

ತ್ಯಾಜ್ಯ ತೆಗೆಯುವಿಕೆಯು ವಯಸ್ಸಾದ ಪುರುಷರು ಮತ್ತು ಮಹಿಳೆಯರಿಗೆ ಕೆಲಸ ಮಾಡಲು ಅವಕಾಶ ನೀಡುತ್ತದೆ. ಆದರೆ ಒಂದು ಹಂತದ ನಂತರ ಇನ್ನು ಮುಂದೆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಎಂದು ಅವರಿಗೆ ತಿಳಿದಿದೆ. ಹೀಗಾಗಿ "ತ್ಯಾಜ್ಯ ಆಯುವವರಿಗೆ ಪಿಂಚಣಿ ಮತ್ತು ಕೆಲವು ರೀತಿಯ ವೃದ್ಧಾಪ್ಯ ಆರೈಕೆಯು ಅವರಿಗೆ ಪ್ರಯೋಜನಕಾರಿಯಾಗಿದೆ" ಎಂದು ಅನಿತಾ ಅಭಿಪ್ರಾಯಟ್ಟಿದ್ದಾರೆ.

ಆದರೆ ಗಮನಿಸಬೇಕಾದ ಉತ್ತಮ ಸಂಗತಿಯೆಂದರೆ, ತ್ಯಾಜ್ಯವನ್ನು ಆಯುವವರು ತಮಗೆ ಏನು ಬೇಕು ಮತ್ತು ಅವರಿಗೆ ಯಾವುದು ಒಳ್ಳೆಯದು ಎಂದು ಚೆನ್ನಾಗಿ ತಿಳಿದಿದ್ದಾರೆ. ಅವುಗಳನ್ನು ಸ್ಪಷ್ಟವಾಗಿ ಹೇಳಲು ಅವರು ಹಿಂಜರಿಯುವುದಿಲ್ಲ.. ತ್ಯಾಜ್ಯ ಆಯುವವರ ದೃಷ್ಟಿಕೋನ, ಸಮಾಜ ಹಾಗೂ ಸರ್ಕಾರಕ್ಕೆ ಅವರ ಬೇಡಿಕೆಗಳು ಹಾಗೂ ಅವರ ಸಮಗ್ರ ತಿಳುವಳಿಕೆಯನ್ನು ಅರಿಯಲು ಈ ಕಳವಳಗಳು ಕೆಕೆಪಿಕೆಪಿಗೆ ಸಾಕ್ಷಿಯಾಗಿವೆ.

ವಾಸ್ತವವಾಗಿ, ತ್ಯಾಜ್ಯ ಆಯುವವರ ಏಕೀಕರಣದ ಕುರಿತು ನೀತಿ ರೂಪಿಸುವ ಜಾಗತಿಕ ವೇದಿಕೆಗಳ ಪ್ರಸ್ತುತ ಚರ್ಚೆಗಳಲ್ಲಿ “ನಮ್ಮನ್ನು ತೊಡಗಿಸಿಕೊಳ್ಳಿ, ನಮ್ಮೊಂದಿಗೆ ಮಾತನಾಡಿ, ನಮಗೆ ಏನು ಬೇಕು ಮತ್ತು ನಮಗೆ ಯಾವುದು ಒಳ್ಳೆಯದು ಎಂದು ನಿಮಗೆ ತಿಳಿದಿದೆ ಎಂದು ಭಾವಿಸಬೇಡಿ.”ಎಂಬ ಅವರ ಸಂದೇಶವು ಪ್ರತಿಧ್ವನಿಸುತ್ತಿದೆ.

ನಿರ್ಧಾರ ತೆಗೆದುಕೊಳ್ಳುವವರು ನಮ್ಮ ಬಗ್ಗೆ ಗಮನ ಹರಿಸುತ್ತಾರೆ ಎಂಬುದು ಉತ್ಕಟ ಭರವಸೆಯಾಗಿದೆ



©AMIT THAVARAJ, FOR KKPKP

# ಆಶಾ ಮತ್ತು ಸಾರಿಕಾ

## ತ್ಯಾಜ್ಯ ಆಯುವ ಮೂಲಕ ತಮ್ಮನ್ನು ತಾವೇ ಉನ್ನತೀಕರಿಸಿಕೊಂಡವರು

52 ವರ್ಷದ ಆಶಾ ಬಾಬನ್ ಜೊಂಬಡೆ ಅಥವಾ ಆಶಾಬಾಯಿ ಮತ್ತು 36 ವರ್ಷದ ಸಾರಿಕಾ ಬಾಬನ್ ಗಾಯಕ್ವಾಡ್, ಇವರಿಬ್ಬರೂ ಕಳೆದ ಅಕ್ಟೋಬರ್‌ನಲ್ಲಿ ಭಾರತದ ಪುಣೆಯಲ್ಲಿರುವ ಸ್ವಚ್ ಸಂಸ್ಥೆಯ ಕಛೇರಿಯಲ್ಲಿ ನಡೆದ ಸಂದರ್ಶನದಲ್ಲಿ ತಮ್ಮ ಸುಂದರವಾದ ಮಣಿಕಟ್ಟು, ಕುತ್ತಿಗೆ ಮತ್ತು ಕಿವಿಗಳನ್ನು ಅಲಂಕರಿಸುವ ಆಭರಣಗಳು ಮತ್ತು ಸೀರೆಯಲ್ಲಿ ಸಂತೋಷದ ಉತ್ಸಾಹದಲ್ಲಿದ್ದರು. ಆದರೆ ಅವರ ಸುಂದರವಾದ ವೇಷಭೂಷಣ, ಅವರ ಪ್ರಕಾಶಮಾನವಾದ ನಗು, ಅವರ ಸಮಚಿತ್ತತೆ ಹಾಗೂ ಪ್ರಾಮಾಣಿಕತೆ ಅವರ ಜೀವನದ ಪ್ರಯಾಣವನ್ನು ವಿವರಿಸುವಷ್ಟು ಗಮನಾರ್ಹವಾಗಿರಲಿಲ್ಲ. ಅವರಲ್ಲಿ ಪ್ರೀತಿಯ ನಮ್ರತೆ ಮತ್ತು ಹೆಮ್ಮೆಯು ಹೊಳೆಯುತ್ತಿತ್ತು. ಅವರು ತಮ್ಮ ದಾರಿಯಲ್ಲಿ ಬರುವ ಎಲ್ಲ ಅಡೆತಡೆಗಳನ್ನು ಮತ್ತು ಸವಾಲುಗಳನ್ನು ಸಮರ್ಥವಾಗಿ ಎದುರಿಸಿದರು. ಕೊನೆಯಲ್ಲಿ, ಅವರು ಶಕ್ತಿಶಾಲಿ ವ್ಯಕ್ತಿಗಳಾಗಿ ಹೊರಹೊಮ್ಮಿದರು. ಅವರ ಜೀವನವು ಶಾಶ್ವತವಾಗಿ ಪರಿವರ್ತನೆಯಾಯಿತು.

ಆಶಾ ಮತ್ತು ಸಾರಿಕಾ ಇಬ್ಬರೂ ಘನತ್ಯಾಜ್ಯ ಸಂಗ್ರಹ, ನಿರ್ವಹಣೆ ಮತ್ತು ಸ್ವಚ್ ಸಂಸ್ಥೆಯ ಸದಸ್ಯರಾಗಿದ್ದಾರೆ. ಇದು ಪುಣೆ ನಗರಕ್ಕೆ ಘನತ್ಯಾಜ್ಯ ಸಂಗ್ರಹಣೆ ಸೇವೆಗಳನ್ನು ಒದಗಿಸಲು ಪುಣೆಯ ಪುರಸಭೆಯಿಂದ ಗುತ್ತಿಗೆ ಪಡೆದಿರುವ ತ್ಯಾಜ್ಯ ಆಯುವವರ ಸಹಕಾರಿ ಸಂಸ್ಥೆಯಾಗಿದೆ. ಇವರು ನಗರದ ಬಡ ಸಮುದಾಯಗಳಿಂದ ತ್ಯಾಜ್ಯವನ್ನು ಸಂಗ್ರಹಿಸುತ್ತಾರೆ. ಅವರ ಈ ಕೆಲಸದ ಬಗ್ಗೆ ಅವರಿಗೆ ಹೆಮ್ಮೆ ಇದೆ. ಅವರ ಪ್ರಕಾರ ತ್ಯಾಜ್ಯ ಆಯುವುದು ಅವರ ಭವಿಷ್ಯವನ್ನು ಗಮನಾರ್ಹವಾಗಿ ಬದಲಾಯಿಸಿತು. ಅವರ ಹಿಂದಿನ ಬದುಕಿನೊಂದಿಗಿನ ಹೋರಾಟಗಳಿಂದ ವಿಮೋಚನೆಗೊಳಿಸಿ, ಮನಸ್ಸಿಗಾಗುವ ನಿರಂತರ ನೋವುಗಳು, ಬದುಕಿನಲ್ಲಿ ಎದುರಾಗುವ ಕಲಹಗಳನ್ನು ಎದುರಿಸಿ, ಜಯಿಸಲು ಧೈರ್ಯ ನೀಡಿತು.



**ಎಂದಿಗೂ ಕೊನೆಗೊಳ್ಳದ ಸಮಸ್ಯೆಗಳು :**
ಆಶಾ ಮತ್ತು ಸಾರಿಕಾ ಅವರ ಜೀವನದ ಕಥೆಗಳಲ್ಲಿನ ಸಾಮ್ಯತೆಯು ಅವರ ಸಮಾಜದ ಆಧಾರವಾಗಿರುವ ವ್ಯವಸ್ಥಿತ ಬಡತನವನ್ನು ಹೇಳುತ್ತದೆ. ಇಬ್ಬರೂ ಕಷ್ಟಕರವಾದ ಬಾಲ್ಯವನ್ನು ಹೊಂದಿದ್ದರು. ಅಲ್ಲಿ ಅವರು ಕುಡುಕ ತಂದೆ ಹಾಗೂ ತಮ್ಮ ಮನೆಯಂತೆ ತೀವ್ರ ಬಡತನ ಪರಿಸ್ಥಿತಿಯ ಸಮುದಾಯದ ಯುವಕನನ್ನು ಮದುವೆಯಾಗುವ ಮೂಲಕ ತೀವ್ರ ಅಭದ್ರತೆ ಮತ್ತು ಕಷ್ಟಗಳನ್ನು ಅನುಭವಿಸಿದರು. ಆಶಾ ಅವರು ಬಾಲ್ಯದಲ್ಲಿಯೇ ತ್ಯಾಜ್ಯ ಆಯುವವಳಾದರು. "ನಾನು ಇದರಿಂದ ಸಾಕಷ್ಟು ಮುಜುಗರಕ್ಕೊಳಗಾಗಿದ್ದೇನೆ," ಎಂದು ಅವರೇ ಹೇಳಿಕೊಂಡರು.

ಪ್ರಾಥಮಿಕ ಶಿಕ್ಷಣವನ್ನೂ ಪಡೆಯದಿರುವ ಕಾರಣದಿಂದಾಗಿ, ಆಶಾ ಅವರ ಉದ್ಯೋಗ ಆಯ್ಕೆಗಳು ಸೀಮಿತವಾಗಿದ್ದವು. ಹೀಗಾಗಿ ಅವರು ಅನೇಕ ಅನೌಪಚಾರಿಕ ಕೆಲಸಗಳನ್ನು ಮಾಡುತ್ತಿದ್ದರು. ಹೆಂಚಿನ ಕಾರ್ಖಾನೆ ಮತ್ತು ಮನೆಗೆಲಸಗಳನ್ನು ಮಾಡುತ್ತಿದ್ದರು. ಅವರಿಗೆ ಕೇವಲ 16

ವರ್ಷ ವಯಸ್ಸಾಗಿದ್ದಾಗ, ಕೂಲಿ ಕಾರ್ಮಿಕನೊಂದಿಗೆ ಮದುವೆ ಮಾಡಲಾಯಿತು. ನಂತರ ಅವರಿಗೆ ಒರ್ವ ಮಗಳು ಮತ್ತು ಇಬ್ಬರು ಗಂಡು ಮಕ್ಕಳು ಜನಿಸಿದರು.

ಅವರ ಮಕ್ಕಳು ವಯಸ್ಕರಾದ ನಂತರ ಮತ್ತು ಅವರು ತಮ್ಮ ಕುಟುಂಬಗಳೊಂದಿಗೆ ಬೇರೆಡೆ ನೆಲೆಸಿದರು. ಇನ್ನು ಆಶಾ ಅವರು ಹೊಸದಾಗಿ ಕೆಲಸ ಪ್ರಾರಂಭಿಸಲು ಪುಣೆಯ ಹೊರವಲಯಕ್ಕೆ ಸ್ಥಳಾಂತರಗೊಂಡರು. ದುರದೃಷ್ಟಶಾವತ್ ಒಂದು ದಿನ ದೇವಸ್ಥಾನಕ್ಕೆ ಹೋಗುವಾಗ ಆಶಾ ಅವರಿಗೆ ಅಪಘಾತವಾಯಿತು. ಅಲ್ಲಿಂದ ಆಶಾ ಅವರ ಜೀವನವು ಕೆಟ್ಟ ತಿರುವು ಪಡೆಯಿತು.

"ನಾನು ತಿಂಗಳುಗಟ್ಟಲೆ ಆಸ್ಪತ್ರೆಗೆ ದಾಖಲಾಗಿದ್ದೆ (17 ಹೊಲಿಗೆಗಳನ್ನು ಹಾಕಬೇಕಲಾಯಿತು)" ಎಂದು ಅವರು ಹೇಳಿಕೊಂಡರು.

ಈ ಅಪಘಾತವು ತ್ಯಾಜ್ಯ ಆಯುವಂತಹ ಲಾಭದಾಯಕ ಕೆಲಸವನ್ನು ಮಾಡದಂತ ಪರಿಸ್ಥಿತಿಯನ್ನು ನಿರ್ಮಿಸಿತು. ಆಕೆಯ ಗಾಯಗಳು ಭಾರ ಎತ್ತುವಿಕೆಯನ್ನು ಅಸಾಧ್ಯವಾಗುವಂತೆ ಮಾಡಿದವು.

ಇದೇ ವೇಳೆಯಲ್ಲಿಯೇ, ಆಶಾ ಅವರ ಪತಿ ಪಾರ್ಶ್ವವಾಯುವಿಗೆ ತುತ್ತಾದರು. ಅವರ ಮಕ್ಕಳು ಈ ಸಮಯದಲ್ಲಿ ಅವರಿಗೆ ಯಾವುದೇ ಸಹಾಯ ಮಾಡಲಿಲ್ಲ; ಒರ್ವ ಮದ್ಯವ್ಯಸನಿಯಾಗಿದ್ದರೇ, ಇನ್ನೊಬ್ಬ ಬೇಜವಾಬ್ದಾರಿ ವ್ಯಕ್ತಿಯಾಗಿದ್ದನು. ಹೀಗಾಗಿ ಆಶಾ ಅವರು ತನ್ನ ಗಂಡನ ಚಿಕಿತ್ಸೆಗಾಗಿ ಲಭ್ಯವಿರುವ ಯಾವುದೇ ಕೆಲಸವನ್ನಾದರೂ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು.

ಅದೃಷ್ಟವಶಾತ್, ಅವರ ಗಂಡ ಚೇತರಿಸಿಕೊಡು, ಮರಳಿ ಕೆಲಸಕ್ಕೆ ಸೇರಿದರು. ಅವರ ಗಂಡ ಈ ಬಾರಿ ಸಾಕಷ್ಟು ಹುಮ್ಮಸ್ಸು ಹಾಗೂ ಭರವಸೆಯೊಂದಿಗೆ ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡರು. ಸಾಲ ಮಾಡಿ ಮೇಕೆ ಖರೀದಿಸಿದರು. ಅದು ಮೂರು ಮರಿಗಳನ್ನು ಹಾಕಿತು. ಆಗ ಅವರಿಬ್ಬರೂ ತಮ್ಮ ಆರ್ಥಿಕ ಸಂಕಷ್ಟಗಳು ಕೊನೆಗೂ ಮುಗಿದವು ಎಂದುಕೊಂಡರು. ದುರದೃಷ್ಟವಶಾತ್, ಅದು ಹಾಗಾಗಲಿಲ್ಲ. ಅವರ ಗಂಡ ಮತ್ತೆ ಅನಾರೋಗ್ಯಕ್ಕೆ ಒಳಗಾದರು. ತಿಂಗಳುಗಳ ಕಾಲ ಅಸಹನೀಯ ನೋವಿನಿಂದ ಬಳಲುತ್ತಿದ್ದರು. ಹೀಗಾಗಿ ಆಸ್ಪತ್ರೆಗೆ ಸೇರಿಸುವ ಅನಿವಾರ್ಯತೆ ಮತ್ತೆ ನಿರ್ಮಾಣವಾಯಿತು.


©AMIT THAVARAJ, FOR KKPKP



ಇನ್ನು ಸಾರಿಕಾ ಅವರ ಜೀವನದ ಹಾದಿಯು ಸುಲಭವಾಗಿರಲಿಲ್ಲ. ತ್ಯಾಜ್ಯ ಆಯುವವರ ಮಗಳಾಗಿ ಬಾಲ್ಯದಿಂದಲೂ ಈ ಕೆಲಸ ಅವರಿಗೆ ಪರಿಚಿತವಾಗಿತ್ತು. ಅವರಿಗೆ ಕೇವಲ 13 ವರ್ಷವಿದ್ದಾಗ ಮದುವೆಯಾಯಿತು. ಮದುವೆಯಾದ ವರ್ಷದೊಳಗೆ ಮಗಳನ್ನು, ನಂತರ ಮಗನನ್ನು ಹೆತ್ತಳು.

ಆದರೆ ಆಕೆಯ ಪತಿ ಮದ್ಯವ್ಯಸನಿಯಾಗಿದ್ದು, ಆಕೆಯ ಸಂಪಾದನೆಯಿಂದ ಕುಡಿಯುವುದು ಮಾತ್ರವಲ್ಲದೆ ಅವರನ್ನು ಹೊಡೆಯುತ್ತಿದ್ದ. ಆದರೂ ಸಾರಿಕಾ ಕುಟುಂಬವನ್ನು ಪೋಷಿಸಲು, ಅವರಿವರ ಮನೆಗೆಲಸದ ಜೊತೆಗೆ ಅನೇಕ ಸಣ್ಣ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಆದರೆ ಎಂಟು ವರ್ಷಗಳ ನಂತರ ಪತಿಯೊಂದಿಗಿನ ನಿರಂತರ ಜಗಳದ ಕಾರಣದಿಂದಾಗಿ, ಅವರು ತನ್ನ ಮಗಳೊಂದಿಗೆ ಗಂಡನ ಮನೆಯಿಂದ ಹೊರಬಂದರು. ಅಲ್ಲಿಂದ ಅವರು ಹಿಂತಿರುಗಿ ನೋಡಲೇ ಇಲ್ಲ. ತನ್ನನ್ನು ಹಾಗೂ ತನ್ನ ಮಕ್ಕಳನ್ನು ಪೋಷಿಸಲು ಗೃಹ ಕಾರ್ಮಿಕರಾಗಿ ಕೆಲಸ ಮಾಡುವುದನ್ನು ಮುಂದುವರೆಸಿದರು. ಈ ಮಧ್ಯೆ ಉತ್ತಮ ಕೆಲಸದ ಅವಕಾಶಗಳಿಗಾಗಿ ಹುಡುಕಲಾರಂಭಿಸಿದರು. ಆದರೆ ಆಶಾ ಅವರಂತೆಯೇ, ಈ ಹಿಂದೆ ನಡೆದಿದ್ದ ಅಪಘಾತದಿಂದಾಗಿ ಸಾರಿಕಾ ಅವರಿಗೂ ಹೆಚ್ಚು ಶ್ರಮದಾಯಕ ಕೆಲಸ ಮಾಡುವ ಸಾಮರ್ಥ್ಯವಿರಲಿಲ್ಲ.

### ಅವರ ಬದುಕನ್ನೇ ಬದಲಿಸಿದ ಕರೆ :

ತ್ಯಾಜ್ಯ ಆಯುವ ಮತ್ತು ಅದರ ಪರಿಚಾರಕರಿಗೆ ಸಿಗುವ ಪ್ರಯೋಜನಗಳ ಬಗ್ಗೆ ತಿಳಿದಿದ್ದರೂ, ಅದನ್ನು ಮಾಡಲು ಸ್ವತಃ ಸಾರಿಕಾಗೆ ಮನಸ್ಸು ಇರಲಿಲ್ಲ. ಆದರೆ ತ್ಯಾಜ್ಯ ಆಯುವ ಗೆಳೆಯರೊಬ್ಬರು ಇದನ್ನೊಮ್ಮೆ ಪ್ರಯತ್ನಿಸುವಂತೆ ಸಲಹೆ ನೀಡಿದ ನಂತರ ಸಾರಿಕಾ ಈ ಕೆಲಸವನ್ನು ಮಾಡತೊಡಗಿದರು.

"ಮೊದಲ ದಿನ, ಈ ಕೆಲಸದಲ್ಲಿ ಹೇಗೆ ತೊಡಗಿಕೊಳ್ಳಬೇಕೆಂದು ನನಗೆ ತಿಳಿದಿರಲಿಲ್ಲ. ಆದ್ದರಿಂದ ನಾನು ನನ್ನ ಸ್ನೇಹಿತೆ ಕೆಲಸ ಮಾಡುತ್ತಿರುವುದನ್ನು ಗಮನಿಸಿದೆ. ಆಗ ಇದು ನನಗೆ ಸರಿಯಾದ ಕೆಲಸ ಎಂದು ನನಗೆ ತಕ್ಷಣ ತಿಳಿಯಿತು" ಎಂದು ಸಾರಿಕಾ ಹೇಳುತ್ತಾರೆ.

ಆಶಾಗೆ ಅತ್ತಿಗೆಯೇ ಈ ಕೆಲಸ ಮಾಡಲು ಮನವೊಲಿಸಿದಳು. “ನಾನು ನಗರಕ್ಕೆ ಬಂದು ಅವಳೊಂದಿಗೆ ಕೆಲವು ದಿನಗಳ

ಕಾಲ ಕೆಲಸ ಮಾಡಿ ನಂತರ ನಗರದ ಹೊರವಲಯಕ್ಕೆ ಹಿಂತಿರುಗಿದೆ. ಈ ಮಧ್ಯೆ ಶೀಘ್ರದಲ್ಲೇ ತನ್ನ ನೆರೆಹೊರೆಯಲ್ಲಿ ತ್ಯಾಜ್ಯ ಆಯುವವರೊಬ್ಬರು ತಮ್ಮ ಕೆಲಸವನ್ನು ನಿಲ್ಲಿಸುತ್ತಿದ್ದಾರೆ. ಹೀಗಾಗಿ ನೀನು ಆ ಜಾಗಕ್ಕೆ ಸೇರಬಹುದೆಂದು ನನ್ನ ಅತ್ತಿಗೆ ನನಗೆ ಕರೆ ಮಾಡಿದಳು ಎಂದು ಆಶಾ ತಮ್ಮ ಅನುಭವ ಹಂಚಿಕೊಂಡರು. ಈ ಅವಕಾಶವನ್ನು ಬಳಸಿಕೊಂಡ ಆಶಾ ಅವರು ಸಾರಿಕಾ ಅವರಂತೆಯೇ ಹಿಂತಿರುಗಿ ನೋಡಲಿಲ್ಲ.

ಅದೃಷ್ಟವಶಾತ್, ಆಶಾ ಅವರ ಅತ್ತಿಗೆ ಮತ್ತು ಸಾರಿಕಾ ಅವರ ಸ್ನೇಹಿತೆ ಇಬ್ಬರೂ ಸ್ವಚ್ ಸಂಸ್ಥೆಯ ಸದಸ್ಯರಾಗಿದ್ದರು. ಇದರ ಅರ್ಥವೇನೆಂದರೆ, ಅವರು ನೋಡಿದ ಮತ್ತು ತೊಡಗಿಸಿಕೊಂಡಿರುವ ತ್ಯಾಜ್ಯವನ್ನು ಆಯುವಿಕೆಯು ಇನ್ನು ಮುಂದೆ ಅವರ ಘೋರ ಬಾಲ್ಯದ ನೆನಪುಗಳನ್ನು ಪ್ರತಿನಿಧಿಸುವುದಿಲ್ಲ. ಸ್ವಚ್ ಮತ್ತು ಕೆಕೆಪಿಕೆಪಿ ಸಂಸ್ಥೆಯ ಈ ಪರಿವರ್ತನಾಶೀಲ ಕೆಲಸಕ್ಕೆ ಧನ್ಯವಾದಗಳು. ಇದು ತ್ಯಾಜ್ಯ ಆಯುವವರ ಜೀವನವನ್ನು ಗಣನೀಯವಾಗಿ ಬದಲಾಯಿಸಿತು.

ಈ ಹಿಂದೆ, ತ್ಯಾಜ್ಯ ಆಯುವವರು ಹಲವಾರು ಕಿಲೋಮೀಟರ್‌ಗಳನ್ನು ಸುತ್ತುತ್ತಾ, ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಮರುಪಡೆಯಲು ಕೊಳೆತ ಹಾಗೂ ಮಿಶ್ರಿತ ತ್ಯಾಜ್ಯಗಳ ರಾಶಿಯನ್ನು ಜಾಲಾಡುತ್ತಿದ್ದರು. ಈ ವೇಳೆ ಅಧಿಕಾರಿಗಳಿಂದ ಕಿರುಕುಳಕ್ಕೊಳಗಾಗುವುದು ಮತ್ತು ಕಳ್ಳತನದಂತ ಆರೋಪಗಳನ್ನು ಎದುರಿಸುತ್ತಿದ್ದರು. ಈಗ, ಮನೆಗಳು ಮತ್ತು ವಾಣಿಜ್ಯ ಸಂಸ್ಥೆಗಳಿಂದ ನೇರವಾಗಿ ತ್ಯಾಜ್ಯವನ್ನು ಸಂಗ್ರಹಿಸಲು ಪುಣೆ ಮುನ್ಸಿಪಲ್ ಕಾರ್ಪೊರೇಷನ್ ಸ್ವಚ್ ಸಂಸ್ಥೆಗೆ ಗುತ್ತಿಗೆ ನೀಡುತ್ತಿದೆ. ತ್ಯಾಜ್ಯವನ್ನು ಹಸ್ತಾಂತರಿಸುವ ಮೊದಲು ಅವರು ತಮ್ಮ ತ್ಯಾಜ್ಯವನ್ನು ಒಣ, ಜೈವಿಕ ಮತ್ತು ನೈರ್ಮಲ್ಯ ತ್ಯಾಜ್ಯಗಳಾಗಿ ವಿಂಗಡಿಸುವ ಅಗತ್ಯವಿದೆ. ಇದು ಈಗಲೂ ಕಠಿಣವಾದ ಕೆಲಸವಾಗಿದ್ದರೂ, ವೃತ್ತಿಯಾಗಿ ತ್ಯಾಜ್ಯವನ್ನು ಆಯುವುದು ಘನತೆ ಮತ್ತು ಗೌರವವನ್ನು ಪಡೆದುಕೊಂಡಿದೆ. ಅದೇ ರೀತಿ ಕೆಲಸದ ನಿಯಮಗಳು ಮೊದಲಿಗಿಂತ ಕಡಿಮೆ ಶ್ರಮದಾಯಕ ಮತ್ತು ಹೆಚ್ಚು ನೈರ್ಮಲ್ಯಯುತವಾಗಿವೆ.

ಸರ್ಕಾರದ ಮಾನ್ಯತೆ ಮತ್ತು ನಾಗರಿಕರ ಗ್ರಹಿಕೆಯಲ್ಲಿನ ಬದಲಾವಣೆಯೂ ತ್ಯಾಜ್ಯ ಆಯುವವರನ್ನು ನೋಡುವ ದೃಷ್ಟಿಕೋನವನ್ನೇ ಬದಲಿಸಿದೆ. ಈಗ ಅನೇಕ ನಾಗರಿಕರು ಗೌರವಿಸುತ್ತಾರೆ ಮತ್ತು ಕೆಲವರು ಸ್ನೇಹಪರರಾಗಿದ್ದಾರೆ. ಆಶಾ ಅವರ ಪತಿ ನಿಧನರಾದಾಗ, ಅವರು ಕೆಲಸ ಮಾಡುತ್ತಲೇ ದುಃಖದಿಂದ ಹೊರಬಂದರು. ಇದನ್ನು ಕಂಡ ಹಲವಾರು ನಾಗರಿಕರು ತಮ್ಮ ಸಂತಾಪ ವ್ಯಕ್ತಪಡಿಸಿ ಬೆಂಬಲ ಸೂಚಿಸಿದರು. "ನನ್ನ ಕೆಲಸದಿಂದಾಗಿ, ಜನರು ಈಗ ನನ್ನನ್ನು ಗುರುತಿಸುತ್ತಾರೆ. ನಾನು ಹೇಗಿದ್ದೇನೆ ಎಂದು ಕೇಳುತ್ತಾರೆ ; ನನ್ನ ಬಗ್ಗೆ ಕಾಳಜಿ ವಹಿಸುತ್ತಾರೆ. ಸಂಸ್ಥೆಯ ಭಾಗವಾಗಿರುವುದು ಕುಟುಂಬದ ಭಾಗವಾಗಿರುವಂತೆ ಅನಿಸುತ್ತೇ" ಎಂದು ಆಶಾ ತಮ್ಮ ಭಾವನೆಗಳನ್ನು ಹಂಚಿಕೊಂಡರು.

ನಗರದ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯಲ್ಲಿನ ಸುಧಾರಣೆಗಳು ಆಶಾ, ಸಾರಿಕಾ ಮತ್ತು ಸ್ವಚ್ ಸಂಸ್ಥೆಯ 3,500 ತ್ಯಾಜ್ಯ ಆಯುವವರಿಗೆ ತಮ್ಮ ನಿಯೋಜಿತ ಮಾರ್ಗಗಳಿಂದ ತ್ಯಾಜ್ಯವನ್ನು ಸಂಗ್ರಹಿಸಲು ಸುಲಭವಾಯಿತು. ಅದೇ ರೀತಿ ಅವರು ಸೇವೆ ಸಲ್ಲಿಸುವ ಮನೆಗಳು ಪಾವತಿಸುವ ತ್ಯಾಜ್ಯ ಬಳಕೆದಾರರ ಶುಲ್ಕ ಹಾಗೂ ಅವರು ಸಂಗ್ರಹಿಸುವ ತ್ಯಾಜ್ಯದಿಂದ ಮರುಬಳಕೆ ಮಾಡಬಹುದಾದ ವಸ್ತುಗಳ ಮಾರಾಟ ಹೀಗೆ ಎರಡು ಕಡೆಗಳಿಂದ ಹಣ ಗಳಿಸುವುದರಿಂದಾಗಿ ಅವರ ಆದಾಯವೂ ಹೆಚ್ಚಿತು. ಹೆಚ್ಚುವರಿಯಾಗಿ, ಅವರು ಈಗ ಉದ್ಯೋಗ ನೀಡುವ ಸ್ವತಂತ್ರ್ಯತೆ ಮತ್ತು ಸ್ವಾಯತ್ತತೆಯನ್ನು ಸಹ ಹೊಂದಿದ್ದಾರೆ.

"ನಾನು ನನ್ನದೇ ಆದ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇನೆ. ನನ್ನ ಅಗತ್ಯಗಳ ಆಧಾರದ ಮೇಲೆ ನಾನು ಎಷ್ಟು ಗಂಟೆಗಳ ಕಾಲ ಕೆಲಸ ಮಾಡಬೇಕೆಂದು ನಾನೇ ನಿರ್ಧರಿಸಬಹುದು. ಬೇರೆಯವರ ಬಳಿ ದುಡಿದರೆ ನನಗೆ ನಿಗದಿತ ಸಂಬಳವಿದ್ದು, ದಿನಕ್ಕೆ ಎಂಟು ಗಂಟೆ ದುಡಿಯಬೇಕಾಗುತ್ತದೆ. ಅಲ್ಲಿ ನಾನು ಬಯಸಿದ್ದನ್ನು ಮಾಡಲು ನನಗೆ ಸ್ವಾತಂತ್ರ್ಯವಿಲ್ಲ"ಎನ್ನುತ್ತಾರೆ ಸಾರಿಕಾ. "ಈಗ ನನ್ನ ಮಕ್ಕಳು ಸಂತೋಷವಾಗಿದ್ದಾರೆ, ಅವರಿಗೆ ಉತ್ತಮ ಆಹಾರ ಸಿಗುತ್ತಿದೆ, ಶಾಲೆಗೆ ಹೋಗಲು ಸಮರ್ಥರಾಗಿದ್ದಾರೆ. ಹೀಗಾಗಿ ನನ್ನ ಕೆಲಸದ ಬಗ್ಗೆ ನಾನು ತುಂಬಾ ಹೆಮ್ಮೆಪಡುತ್ತೇನೆ." ಎಂದು ಸಾರಿಕಾ ಹೇಳಿದರು.

"ಈ ಕೆಲಸದ ಅತ್ಯುತ್ತಮ ಭಾಗವೆಂದರೆ ನಿಮಗೆ ವಯಸ್ಸಾದಾಗಲೂ ಸಹ ನೀವು ಇನ್ನೂ ಕೆಲಸ ಮಾಡಬಹುದು. ಆದರೆ ಗುತ್ತಿಗೆದಾರರು ವಯಸ್ಸಿನ ಮಿತಿ ವಿಧಿಸಿದರೇ, ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಸಾರಿಕಾ ಅವರ ಮಾತಿಗೆ ಮಧ್ಯಪ್ರವೇಶಿಸಿದ ಆಶಾ ಅವರು, "ನಾವು ಕೆಲವು ರೀತಿಯ ಪಿಂಚಣಿ ಯೋಜನೆಗಳಿಗೆ ದಾಖಲಾಗಬೇಕು. ಇದರಿಂದ ನಮ್ಮ ವೈದ್ಯಕೀಯ ಅಗತ್ಯಗಳಿಗೆ ಹೆಚ್ಚಿನ ನೆರವನ್ನು ಪಡೆಯಬಹುದು ಎಂದು ನಾನು ಭಾವಿಸುತ್ತೇವೆ." ಎಂದರು.

ನಮ್ಮ ಆದಾಯವು ಜೀವನೋಪಾಯಕ್ಕೆ ಸಾಕಾಗುತ್ತದೆಯಾದರೂ, ವೈದ್ಯಕೀಯ ಆರೈಕೆಯಂತಹ ದೊಡ್ಡ ಹೊರೆಯಾಗಿವೆ ಎನ್ನುತ್ತಾರೆ ಆಶಾ ಅವರು. "ನನಗೂ ನನ್ನ ಮೊಮ್ಮಕ್ಕಳ ಬಗ್ಗೆ ಚಿಂತೆ. ಅವರ ತಂದೆ ಅವರನ್ನು ಸರಿಯಾಗಿ ಸಾಕುತ್ತಿಲ್ಲ. ಒಂದು ವೇಳೆ ನಾನು ಸತ್ತು ಹೋದರೆ, ನಾನು ನನ್ನ ಮೊಮ್ಮಕ್ಕಳಿಗೆ ಏನನ್ನಾದರೂ ಮಾಡಲು ಸಾಧ್ಯವಾಗದಿದ್ದಾಗ ಅವರಿಗೆ ಏನಾಗುತ್ತದೆ..? ಎಂಬ ಚಿಂತೆ ಕಾಡುತ್ತದೆ. ಇದೆಲ್ಲವನ್ನೂ ಗಮನಿಸಿ ನೋಡಿದರೆ, ಪಿಂಚಣಿ ಯೋಜನೆಗಳು, ನಮಗೆ ಹೆಚ್ಚು ಸಹಾಯಕವಾಗಿವೆ" ಎಂದು ಆಶಾ ಅಭಿಪ್ರಾಯಪಡುತ್ತಾರೆ.

ವಯಸ್ಸಾದ ನಂತರ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಎಂದು ಅರಿತ, ಆಶಾ ಮತ್ತು ಸಾರಿಕಾ ಇಬ್ಬರೂ ಬುದ್ಧಿವಂತಿಕೆಯಿಂದ ತಮ್ಮ ಹಣವನ್ನು ಹೂಡಿಕೆ ಮಾಡಿದರು. ಮೊದಲನೆಯದು 1,000 ಚದರ ಮೀಟರ್ ಜಾಗದಲ್ಲಿ ಸ್ವಂತ ಮನೆಯನ್ನು ನಿರ್ಮಿಸಿಕೊಂಡರು. ಎರಡನೆಯದು ಅವರಿಬ್ಬರೂ ತಮ್ಮ ಮಕ್ಕಳ ಶಿಕ್ಷಣದ ಮೇಲೆ ಹೂಡಿಕೆ ಮಾಡಿದರು. ಈಗ ಸಾರಿಕಾ ಅವರ ಮಗಳು ವಿಶ್ವವಿದ್ಯಾನಿಲಯದಿಂದ ಕಾನೂನು ಪದವಿಯನ್ನು ಪಡೆಯುತ್ತಿದ್ದಾಳೆ ಮತ್ತು ಮಗ ಪ್ರೌಢಶಾಲೆಯಲ್ಲಿ 9ನೇ ತರಗತಿಯಲ್ಲಿ ಓದುತ್ತಿದ್ದಾನೆ.
"ನನ್ನ ಮಗಳು ನನ್ನ ಅನುಭವಗಳ ಮೂಲಕ ಹೋಗಬೇಕೆಂದು ನಾನು ಬಯಸುವುದಿಲ್ಲ. ಅವಳು ಸ್ವತಂತ್ರಳಾಗಬೇಕು ಮತ್ತು ಸಾಧ್ಯವಾದಷ್ಟು ಸ್ವಾತಂತ್ರ್ಯವನ್ನು ಅವಳು ಅನುಭವಿಸಬೇಕೆಂದು ನಾನು ಬಯಸುತ್ತೇನೆ" ಎಂದು ಸಾರಿಕಾ ತಮ್ಮ ಭಾವನೆಗಳನ್ನು ಹಂಚಿಕೊಂಡಿರು. ಅನೇಕ ತ್ಯಾಜ್ಯ ಆಯುವವರು ಕೆಲಸ ಮತ್ತು ಸಾಮಾಜಿಕ ಭದ್ರತೆಯಿಂದ ವಂಚಿತರಾಗಿರುವುದರಿಂದ, ಸಾರಿಕಾ ಅವರು ತಾನು ಅದೃಷ್ಟವಂತರಲ್ಲಿ ಒಬ್ಬಳು ಎಂದು ಗುರುತಿಕೊಳ್ಳುತ್ತಾರೆ. ತನ್ನ ಮಗಳು ತನ್ನ ಶಿಕ್ಷಣವನ್ನು ಸದುಪಯೋಗಪಡಿಸಿಕೊಳ್ಳಲು, ಅವಳು ಪೂರ್ಣ ಪ್ರಮಾಣದ ವಕೀಲಳಾದ ನಂತರ ಅಂಚಿನಲ್ಲಿರುವ ತ್ಯಾಜ್ಯ ಆಯುವವರಿಗೆ ಸಹಾಯ ಮಾಡಲು ಸಾರಿಕಾ ಅವರು ಪ್ರೋತ್ಸಾಹಿಸುತ್ತಿದ್ದಾರೆ.

"ನಾನು ಒಮ್ಮೆ ನನ್ನ ಮಗಳಿಗೆ ಹೇಳಿದೆ, "ನೀನು ಕಾನೂನು ಪದವಿ ಪಡೆಯುತ್ತಿರುವೇ.. ಎಂದು ನನಗೆ ಹೆಮ್ಮೆ ಇದೆ. ಆದರೆ ನಿನ್ನ ಈ ಯಶಸ್ಸು ಮತ್ತು ಸಂಪಾದಿಸಿರುವ ಜ್ಞಾನವು, ನನ್ನ ಕೆಲಸ ಮತ್ತು ಸ್ವಚ್ ಸಂಸ್ಥೆಗೆ ಸದಾ ಋಣಿಯಾಗಿರಬೇಕೆಂಬುದನ್ನು ಮಾತ್ರ ಮರೆಯಬೇಡ. ಇನ್ನು ತ್ಯಾಜ್ಯ ಆಯುವವರು ವಕೀಲರೊಂದಿಗೆ ಮಾತನಾಡಲು ಸಾಕಷ್ಟು ಕಷ್ಟಪಡುತ್ತಾರೆ. ಏಕೆಂದರೆ ಅವರು ನಮ್ಮೊಂದಿಗೆ ಮಾತನಾಡಲು ಹೆಚ್ಚು ಸಮಯ ನೀಡುವುದಿಲ್ಲ ಮತ್ತು ಅವರ ಭಾಷೆಯನ್ನು ಅರ್ಥಮಾಡಿಕೊಳ್ಳಲು ನಮಗೆ ಕಷ್ಟವಾಗುತ್ತದೆ. ಆದರೆ ನೀನು ನಮ್ಮ ಸಮುದಾಯದಿಂದ ಬಂದವಳು. ಹೀಗಾಗಿ ವಕೀಲಳಾದಾಗ, ನೀನು ನನಗಾಗಿ ಮಾತ್ರವಲ್ಲದೆ, ಇತರ ತ್ಯಾಜ್ಯ ಆಯುವವರಿಗೂ ಸಮಯವನ್ನು ಮೀಸಲಿಟ್ಟು, ಅವರ ಕಾನೂನು ಸಮಸ್ಯೆಗಳಲ್ಲಿ ಅವರಿಗೆ ಸಹಾಯ ಮಾಡುತ್ತೀಯ ಎಂದು ನಾನು ಭಾವಿಸುತ್ತೇನೆ" ಎಂದು ಸಾರಿಕಾ ಹೇಳಿದರು.

"ತಾನು ಹಾಗೆ ಮಾಡಲು ಯೋಜಿಸಿದ್ದೇನೆ" ಎಂದು ತನ್ನ ಮಗಳ ಪ್ರತಿಕ್ರಿಯೆಯಿಂದ ತನಗೆ ಆಶ್ಚರ್ಯವಾಗಲಿಲ್ಲ ಎಂದು ಸಾರಿಕಾ ಹೇಳಿದರು.

ಆಶಾ ಮತ್ತು ಸಾರಿಕಾ ಅವರು ತಮ್ಮ ದಾರಿಯನ್ನು ಹೇಗೆ ಕಂಡುಕೊಂಡರು, ಆ ಮೂಲಕ ಹೇಗೆ ಮೇಲುಗೈ ಸಾಧಿಸಿದರು, ಇಬ್ಬರೂ ತಮ್ಮದೇ ಆದ ಮಾರ್ಗಗಳಲ್ಲಿ ಹೋರಾಡುತ್ತಾ, ಸಾಮೂಹಿಕ ಸದಸ್ಯರಲ್ಲಿ ಒಬ್ಬರಾಗಿ, ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಮಟ್ಟಕ್ಕೆ ಹೇಗೆ ಬೆಳೆದರು ಎಂಬುದು ಸಂದರ್ಶನದಲ್ಲಿ ಅವರು ತೋರಿದ ಭರವಸೆ, ತೃಪ್ತಿ ಮತ್ತು ಸವಾಲುಗಳನ್ನು ಹಂಚಿಕೊಂಡಾಗ ಹೆಚ್ಚು ಸ್ಪಷ್ಟವಾಯಿತು.



©AMIT THAVARAJ, FOR KKPKP

# ಹಸಿರು ದಳ

## ವ್ಯವಸ್ಥಿತ ಪರಿವರ್ತಕ ಬದಲಾವಣೆಗಳನ್ನು ಸ್ಥಾಪಿಸುವುದೆಡೆಗೆ ದಿಟ್ಟ ಹೆಜ್ಜೆ

ಅಲುಮೇಲು ಅವರು  ಕುಟುಂಬದ ಜೀವನೋಪಾಯಕ್ಕಾಗಿ ತನ್ನ ತಾಯಿಗೆ  ಸಹಾಯ ಮಾಡಲು ತ್ಯಾಜ್ಯ ಆಯಲು, ಶಾಲೆಗೆ ಹೋಗುವುದನ್ನು ನಿಲ್ಲಿಸಿದಾಗ, ಅಲುಮೇಲು ಅವರು 1ನೇ ತರಗತಿಯನ್ನುಮಾತ್ರ  ಪೂರೈಸಿದ್ದರು. ತ್ಯಾಜ್ಯ ಆಯುವವರ ಕುಟುಂಬದಲ್ಲಿ ಜನಿಸಿದ ಅವರು ಮತ್ತು ಅವರ ಐದು ಜನ ಒಡಹುಟ್ಟಿದವರು ಕಠಿಣ ಕೆಲಸಗಳಲ್ಲಿ ತೊಡಗಿಕೊಳ್ಳಬೇಕಾಯಿತು. ಆಕೆಯ ತಂದೆ ತೀರಿಕೊಂಡಾಗ ಮತ್ತು ಅವಳ ಅಣ್ಣ-ತಮ್ಮಂದಿರು ಚಿಕ್ಕ ವಯಸ್ಸಿನಲ್ಲೇ ಮದುವೆಯಾದಾಗ, ಕುಟುಂಬದ ಕಿರಿಯ ಸದಸ್ಯರನ್ನು ನೋಡಿಕೊಳ್ಳುವ ಹೊರೆ ಆಕೆ ಮತ್ತು ಆಕೆಯ ತಾಯಿಯ ಮೇಲೆ ಬಿದ್ದಿತು.

ಆದರೆ  ಈ ಚಿಕ್ಕವಯಸ್ಸಿನಲ್ಲೇ  ತಾನು  ಇಷ್ಟೊಂದು ಕಷ್ಟಪಟ್ಟು ಏಕೆ ಕೆಲಸ ಮಾಡಬೇಕೆಂದು ತರುಣಿ ಅಲುಮೇಲುವಿಗೆ ಅರ್ಥವಾಗಲಿಲ್ಲ.  "ನಾನು ಕೆಲವೊಮ್ಮೆ ನನ್ನನ್ನು ನಾನೇ ಕೇಳಿಕೊಳ್ಳುತ್ತೇನೆ..  "ನಾನು ಚಿಕ್ಕ ಹುಡುಗಿ, ನಾನೇಕೆ  ಇದನ್ನೆಲ್ಲಾ ಮಾಡಬೇಕು?" ಎನ್ನುತ್ತಾ ಅಲಮೇಲು ಅವರು ತಮ್ಮ ನೆನಪುಗಳನ್ನು  ಹಂಚಿಕೊಂಡರು.

ಅವಳು ಗೊಂದಲದಲ್ಲಿದ್ದರೂ, ತನ್ನ ಕುಟುಂಬಕ್ಕೆ ಸಹಾಯ ಮಾಡಲು ತನ್ನಿಂದಾಗುವ ಸಹಾಯವನ್ನು  ಅವಳು ಮುಂದುವರಿಸಿದಳು.

ಆಕೆಗೆ 16 ವರ್ಷವಾದಾಗ ಅವಳಿಗೂ ಮದುವೆಯಾಯಿತು.  ನಂತರ  ಒಬ್ಬಳು ಮಗಳು ಮತ್ತು  ಒರ್ವ ಮಗ ಸೇರಿ ಇಬ್ಬರು ಮಕ್ಕಳು ಜನಿಸಿದರು.  ಆದರೆ ಆಕೆಯ ಪತಿ, ಆಕೆಯ ತಂದೆಯಂತೆ ಮದ್ಯವ್ಯಸನಿಯಾಗಿದ್ದನು. ಹೀಗಾಗಿ ಮದುವೆಯಾದ ಕೇವಲ ಎಂಟು ವರ್ಷಗಳ ನಂತರ ಆತನೂ ನಿಧನನಾದನು. ಆಗ ಮತ್ತೊಮ್ಮೆ, ತನ್ನ ಕುಟುಂಬವನ್ನು ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಅವರ ಹೆಗಲ ಮೇಲೆ ಬಿದ್ದಿತು. ಆಗ ಅವರಿಗೆ ಮಾಡಲು ಬರುತ್ತಿದ್ದ ಒಂದು ಉತ್ತಮ ಕೆಲಸವೆಂದರೆ ಅದುವೇ ತ್ಯಾಜ್ಯ ಆಯುವುದು.



"ಅದು ನಿಜಕ್ಕೂ ಕಷ್ಟಕರವಾಗಿತ್ತು" ಎನ್ನುತ್ತಾ ತಮ್ಮ ಅನುಭವವನ್ನು ಹಂಚಿಕೊಂಡ ಅಲುಮೇಲು ಅವರು, "ಆಗೆಲ್ಲಾ ನಾನು ಬೆಳಿಗ್ಗೆ ನಾಲ್ಕು ಗಂಟೆಗೆ ತ್ಯಾಜ್ಯ ಆಯುವುದನ್ನು ಪ್ರಾರಂಭಿಸುತ್ತಿದ್ದೆ, ನಂತರ ಸುಮಾರು 10 ಅಥವಾ 11 ಗಂಟೆಯ ತನಕ ಕೆಲಸ ಮಾಡುತ್ತಿದ್ದೆ,  ಬಿಸಿಲು ಹೆಚ್ಚಾದಾಗ ಸ್ವಲ್ಪ ಬಿಡುವು ತೆಗೆದುಕೊಳ್ಳುತ್ತಿದ್ದೆ, ನಂತರ  ಮಧ್ಯಾಹ್ನ 3 ಗಂಟೆಗೆ ಪುನಃ ಕೆಲಸ ಆರಂಭಿಸುತ್ತಿದ್ದೆ, ಸಂಜೆಯ  5 ಅಥವಾ 6 ಗಂಟೆಯ ಹೊತ್ತಿಗೆ ಕೆಲಸ ಕೊನೆಗೊಳಿಸುತ್ತಿದ್ದೆ" ಎಂದು ಹೇಳಿಕೊಂಡರು.

ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡುವುದು ಸವಾಲಾಗಿದ್ದರೂ, ಇದು ಅಲುಮೇಲು ಅವರ ಮೇಲೆ ಯಾವುದು ಪ್ರಭಾವ ಬೀರಿರಲಿಲ್ಲ.  ಆದರೆ ರಸ್ತೆಬದಿಯ ಕಸದ ರಾಶಿಗಳಿಂದ ತ್ಯಾಜ್ಯವನ್ನು ಸಂಗ್ರಹಿಸಲು ಬೀದಿಗಳಲ್ಲಿ ಸುತ್ತಾಡುತ್ತಿದ್ದಾಗ ಜನರು ಅವರನ್ನು ಹೇಗೆ ನಡೆಸಿಕೊಂಡರು ಎಂಬುದು ಅವರ  ಹೆಚ್ಚು ಪ್ರಭಾವ ಬೀರಿದೆ. ನಾಗರಿಕರು ನನ್ನ ಮೇಲೆ ಅನುಮಾನ ವ್ಯಕ್ತಪಡಿಸುತ್ತಿದ್ದರು. ಅವರು ನನ್ನನ್ನು 'ನೀನು ಯಾಕೆ ಇಲ್ಲಿದ್ದೀಯ? ನೀನು ಇಲ್ಲಿ ಏನು ಮಾಡುತ್ತಿಯಾ?' ಎಂದು ಪ್ರಶ್ನಿಸುತ್ತಿದ್ದರು. ಅವರ  ಪ್ರಶ್ನಿಸುವಿಕೆಯು



ಹೆಚ್ಚಾಗಿ ಕಳ್ಳತನದ ಆರೋಪಗಳಾಗಿ ಬದಲಾಗುತ್ತಿತ್ತು. ಕೆಲವೊಮ್ಮೆ ನಾಗರಿಕರಿಂದ ಅಲ್ಲದಿದ್ದರೆ, ಅಧಿಕಾರಿಗಳಿಂದ ಈ ಆರೋಪ ಕೇಳಿ ಬರುತ್ತಿತ್ತು.

ದುಃಖಕರ ಸಂಗತಿಯೆಂದರೆ, ಕೆಲಸ ಮಾಡುವುದಕ್ಕಾಗಿ ಬಂದಿದ್ದರು,   ಕಿರುಕುಳದಂತಹ  ಈ ರೀತಿಯ   ಘಟನೆಗಳು ಪ್ರತ್ಯೇಕ ಪ್ರಕರಣಗಳಲ್ಲ ; ಇದು ಎಷ್ಟು ವ್ಯಾಪಕವಾಗಿ ಹರಡಿದೆಯೆಂದರೆ, ತ್ಯಾಜ್ಯವನ್ನು ಆಯುವವರೂ ಸಹ ಇದು ಬದಲಾಗುತ್ತದೆ ಎಂದು ಎಂದಿಗೂ ಉಹಿಸಿರಲಿಲ್ಲ.  ಅದೃಷ್ಟವಶಾತ್, ಅದು ಅಂತಿಮವಾಗಿ ಬದಲಾಗಿದೆ.

2010ರಲ್ಲಿ, ಸಾಮಾಜಿಕ ಕಾರ್ಯಕರ್ತೆ ನಳಿನಿ ಶೇಖರ್ ಅವರು ನಿವೃತ್ತಿಯಾಗುವ ಉದ್ದೇಶದಿಂದ ತಮ್ಮ ತವರು ಬೆಂಗಳೂರಿಗೆ ಮರಳಿದರು. ಆ ಸಮಯದಲ್ಲಿ,  ಬೆಂಗಳೂರು ನಗರದಲ್ಲಿ ಇನ್ನೂ ತ್ಯಾಜ್ಯವನ್ನು ಬೇರ್ಪಡಿಸುತ್ತಿರಲಿಲ್ಲ ಮತ್ತು ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯು ಅಸಮರ್ಥವಾಗಿತ್ತು.  ಈ ಮಧ್ಯೆ  ಕೆಲವು ನಾಗರಿಕ ಗುಂಪುಗಳು ತ್ಯಾಜ್ಯ ವಿಕೇಂದ್ರೀಕರಣದ ಮೂಲಕ ಈ  ವ್ಯವಸ್ಥೆಯನ್ನು ಸುಧಾರಿಸುವ ಬಗ್ಗೆ ಚರ್ಚಿಸುತ್ತಿದ್ದವು.  ಆದರೆ  ತ್ಯಾಜ್ಯ ತೆಗೆಯುವವರನ್ನು ಮತ್ತು  ಅವರ  ವ್ಯಾಪಾರ ಕ್ರಮವನ್ನು  ಈ ಚರ್ಚೆಗಳಲ್ಲಿ  ಸೇರಿಸಲಾಗಿಲ್ಲ  ಎಂಬುದನ್ನು  ನಳಿನಿ ಅವರು ಗಮನಿಸಿದರು.

ನಗರಾಡಳಿತದ ಅನುಪಸ್ಥಿತಿಯಲ್ಲಿ ತ್ಯಾಜ್ಯ ನಿರ್ವಹಣೆಗೆ ಹೆಚ್ಚಿನ ಕೊಡುಗೆ ನೀಡುತ್ತಿರುವ ಜನರೇ ತಮ್ಮ ಮೇಲೆ ಹೆಚ್ಚು ಪರಿಣಾಮ ಬೀರುವ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿಲ್ಲ ಎಂಬುದು ಸ್ವೀಕಾರಾರ್ಹವಲ್ಲ ಎಂದು ನಳಿನಿ ಅವರು ಭಾವಿಸಿದರು. ಹೀಗಾಗಿ ನಳಿನ ಅವರ ಅನುಭವದ ಪ್ರಕಾರ, ತ್ಯಾಜ್ಯ ಶ್ರಮಿಕರನ್ನು ಸಬಲೀಕರಣಗೊಳಿಸುವುದು ಒಂದು ಪರಿವರ್ತಕ ಕ್ರಮವಾಗಿದೆ.

ಹದಿಮೂರು ವರ್ಷಗಳ ಹಿಂದೆ, ಅವರು ಮಹಾರಾಷ್ಟ್ರದ ಪುಣೆಯಲ್ಲಿ ತ್ಯಾಜ್ಯ ಆಯುವವರ ಟ್ರೇಡ್ ಯೂನಿಯನ್ನ  ಸಹ-ಸ್ಥಾಪಕರಾಗಿದ್ದರು.  ಅವರ ಕಾಗದ್ ಕಚ್ ಪತ್ರಾ ಕಷ್ಟಕಾರಿ ಪಂಚಾಯತ್ (ಕೆಕೆಪಿಕೆಪಿ) ಸಂಸ್ಥೆಯು ನಗರದಲ್ಲಿನ ತ್ಯಾಜ್ಯ ನಿರ್ವಹಣೆಯನ್ನು ಮಾತ್ರವಲ್ಲದೆ, ಸಾವಿರಾರು ತ್ಯಾಜ್ಯ ಆಯುವವರ ಜೀವನವನ್ನು ಗಮನಾರ್ಹವಾಗಿ ಪರಿವರ್ತಿಸಿತ್ತು.

ತನ್ನದೇ ನಗರದಲ್ಲಿನ ತ್ಯಾಜ್ಯ ಆಯುವವರ ಕೆಟ್ಟ ಪರಿಸ್ಥಿತಿಯನ್ನು ಕಂಡ ನಳಿನಿ ಅವರು, ತಮ್ಮ ನಿವೃತ್ತಿ ಯೋಜನೆಗಳನ್ನು ಬದಿಗಿಟ್ಟರು. ಆನ್ಸೆಲ್ಮ್  ರೊಸಾರಿಯೊ ಜೊತೆಗೂಡಿ ಬೆಂಗಳೂರಿನಲ್ಲಿರುವ  ತ್ಯಾಜ್ಯ ಆಯುವವರನ್ನು ಸಂಘಟಿಸಿ,  ನಗರದ ಪರಿಸರ ಮತ್ತು ಆರ್ಥಿಕತೆಗೆ ತ್ಯಾಜ್ಯ ಆಯುವವರು ನೀಡುತ್ತಿರುವ ಕೊಡುಗೆಗಳನ್ನು  ಗುರುತಿಸಲು ವೇದಿಕೆಯೊಂದನ್ನು ಸೃಷ್ಟಿಸಿದರು.  ಆಗ ಸ್ಥಳೀಯ ಭಾಷೆಯಲ್ಲಿ ಹಸಿರು ದಳ ಎಂದರೆ 'Green Force' ಎಂಬ ಸಂಸ್ಥೆ  ಹುಟ್ಟಿಕೊಂಡಿತು.

### ಗುರುತು ಮತ್ತು ಗುರುತಿಸುವಿಕೆ :

ನಳಿನಿ ಅವರ ಪ್ರಕಾರ, ನಗರ ಪ್ರದೇಶದ  ಅನೌಪಚಾರಿಕ ಕಾರ್ಮಿಕ ವಲಯದಲ್ಲಿ ಮತ್ತು ಭಾರತೀಯ ಜಾತಿ ವ್ಯವಸ್ಥೆಯಲ್ಲಿ ತ್ಯಾಜ್ಯ ಆಯುವವರು ಅತ್ಯಂತ ದುರ್ಬಲರಾಗಿದ್ದಾರೆ.  ನಾವು ಜನಿಸಿದಾಗ, ನಮಗೆ ಜನ್ಮ ಪ್ರಮಾಣಪತ್ರವನ್ನು ನೀಡಲಾಗುತ್ತದೆ. ಆದರೆ ದಲಿತ ಸಮುದಾಯಕ್ಕೆ ಸೇರಿದ ಅನೇಕ ತ್ಯಾಜ್ಯ  ಆಯುವವರು ಶತಶತಮಾನಗಳಿಂದ ಅದೇ  ಸಮುದಾಯದಲ್ಲಿ ನೆಲೆಕೊಂಡಿದ್ದರೂ ಅವರು ಯಾವುದೇ ರೀತಿಯ ಗುರುತನ್ನು ಹೊಂದಿರಲಿಲ್ಲ" ಎಂದು ನಳಿನಿಅವರು  ತಮ್ಮ ಅನುಭವ ಹಂಚಿಕೊಂಡರು.

ಭಾರತೀಯ ಸಮಾಜದಲ್ಲಿ ಅತ್ಯಂತ ಕೆಳಸ್ತರದಲ್ಲಿರುವ ದಲಿತರು ಅಥವಾ ಅಸ್ಪೃಶ್ಯರು ದೇಶದ ಅತ್ಯಂತ ತುಳಿತಕ್ಕೊಳಗಾದ ಸಮುದಾಯವಾಗಿದೆ. ಇಷ್ಟು ದಿನಗಳ ಕಾಲ ಯಾವುದೇ ಗುರುತಿಲ್ಲದೇ ಮತ್ತು ಹೆಸರಿಲ್ಲದೇ  ಅವರು,  ನಗರಗಳಲ್ಲಿ ತ್ಯಾಜ್ಯ ನಿರ್ವಹಿಸುವಂತಹ  ಅಶುಚಿಯಾದ  ಉದ್ಯೋಗವನ್ನು ಮಾಡುತ್ತಿದ್ದರು. ಆದರೂ ಅವರನ್ನು  ನ್ಯಾಯಸಮ್ಮತವಾದ ಕಾರ್ಮಿಕ ಎಂದು ಮಾತ್ರ ಪರಿಗಣಿಸಲಾಗಿರಲಿಲ್ಲ. ಅದೇ ರೀತಿ  ಯಾವುದೇ ಗುರುತಿನ ಚೀಟಿಗಳಿಲ್ಲದ ಕಾರಣ, ಆಹಾರ, ಶಿಕ್ಷಣ ಮತ್ತು ಆರೋಗ್ಯದಂತಹ ಮೂಲಭೂತ ಸಾಮಾಜಿಕ ಸೇವೆಗಳನ್ನು ಪಡೆಯಲು ಅವರಿಗೆ ಸಾಧ್ಯವಾಗಿರಲಿಲ್ಲ.

ಆದ್ದರಿಂದ ನನ್ನ ಮುಖ್ಯ ಕಾಳಜಿಯೆಂದರೆ ಸ್ಥಳೀಯ ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯಲ್ಲಿ ತ್ಯಾಜ್ಯ ಆಯುವವರನ್ನು ಸಂಯೋಜಿಸುವುದರಿಂದ, ಅವರು ಊಹಿಸಬಹುದಾದ ಆದಾಯವನ್ನು ಪಡೆಯಬಹುದು. ಇದರೊಂದಿಗೆ ಅವರು ಸಾಮಾಜಿಕ ಭದ್ರತೆ ಅಥವಾ ಸಾಮಾಜಿಕ ಅರ್ಹತೆಯನ್ನು ಕೂಡಾ ಪಡೆಯಬಹುದು" ಎಂದು ನಳಿನಿ ಅವರು ಹೇಳಿದರು.

ಹೀಗಾಗಿ ತ್ಯಾಜ್ಯ ಆಯುವವರಿಗೆ ಗುರುತಿನ ಚೀಟಿಯನ್ನು ಭದ್ರಪಡಿಸುವಂತೆ ಹಸಿರು ದಳಕ್ಕೆ ಮೊದಲ ಆದೇಶ ನೀಡಲಾಯಿತು.

ಅಲುಮೇಲು ಮತ್ತು ಕೆಲ ತ್ಯಾಜ್ಯ ಆಯುವವರನ್ನು ಹಸಿರು ದಳ ಸಂಸ್ಥೆಯು ಸಂಪರ್ಕಿಸಿದಾಗ, ಅವರೆಲ್ಲರೂ ಗೊಂದಲಕ್ಕೊಳಗಾದರು ಮತ್ತು ಸಂದೇಹ ವ್ಯಕ್ತಪಡಿಸಿದರು ಎಂದು ಅಲುಮೇಲು ಹೇಳಿದರು. "ಒಂದು ದಿನ, ಹಸಿರು ದಳ ಸಂಸ್ಥೆಯ ವತಿಯಿಂದ ಕೆಲವು ಜನರು ನಮ್ಮ ಬಳಿಗೆ ಬಂದರು. ಅವರು ನಮ್ಮ ಕೆಲಸದ ಬಗ್ಗೆ ನಮಗೆ ಬಹಳಷ್ಟು ಪ್ರಶ್ನೆಗಳನ್ನು ಕೇಳಿದರು. ಆಗ ನಾವು ಒಬ್ಬರನ್ನೊಬ್ಬರು ಕೇಳಿಕೊಂಡೆವು, 'ಅವರು ಯಾಕೆ ಈ ಪ್ರಶ್ನೆಗಳನ್ನು ಕೇಳುತ್ತಾರೆ? ಇದರಿಂದ ನಮಗೆ ಏನಾದರೂ ಒಳ್ಳೆಯದಾಗುತ್ತದೆ ಎಂದು ನಾವು ನಂಬಿರಲಿಲ್ಲ" ಎಂದು ಅಲುಮೇಲು ಅವರು ನೆನಪಿಸಿಕೊಂಡರು.

"ನಂತರ ಅವರು ನಮ್ಮ ವಿವರಗಳನ್ನು ತೆಗೆದುಕೊಂಡು ಹೋದರು. ಕೆಲ ದಿನಗಳ ನಂತರ ಬಂದು, ಅವರು ನಮಗೆ ಸ್ಥಳೀಯ ಆಡಳಿತದಿಂದ ಗುರುತಿನ ಚೀಟಿಗಳನ್ನು ನೀಡಿದರು. ಆಗ ನಾವು ಅದರ ಬಗ್ಗೆ ಹೆಚ್ಚು ಯೋಚಿಸಲಿಲ್ಲ. ಆದರೆ ಮುಂದಿನ ಬಾರಿ ನಮಗೆ ತ್ಯಾಜ್ಯ ಆಯುವಾಗ ಕೆಲವರಿಂದ ಕಿರುಕುಳ ಎದುರಾದಾಗ, ನಾವು ನಮಗೆ ನೀಡಿದ್ದ ಗುರುತಿನ ಚೀಟಿಯನ್ನು ತೋರಿಸಿದೆವು.

ನಾವು ತ್ಯಾಜ್ಯ ಆಯುವವರು. ತ್ಯಾಜ್ಯ ಸಂಗ್ರಹಿಸುವ ಹಕ್ಕು ನಮಗಿದೆ. ಹೀಗಾಗಿಯೇ ಸರ್ಕಾರ ನಮಗೆ ಈ ಗುರುತಿನ ಚೀಟಿ ನೀಡಿದೆ ಎಂದು ನಾವು ಹೇಳಿದೆವು. ಆಗ ಅವರು ನಮಗೆ ನೀಡಿದ್ದ ಗುರುತಿನ ಚೀಟಿಯನ್ನು ಒಪ್ಪಿಕೊಂಡರು. ನಮಗೆ ಅಂದಿನಿಂದ ಕಿರುಕುಳ ಕಡಿಮೆಯಾಯಿತು ಎಂದು ಅಲುಮೇಲು ಅವರು ತಮ್ಮ ಅನುಭವವನ್ನು ಹಂಚಿಕೊಂಡರು.

ಇನ್ನು ತ್ಯಾಜ್ಯ ಆಯುವವರ ಒತ್ತಾಯ, ನೀತಿ-ಸಂವಾದಗಳು ಮತ್ತು ನ್ಯಾಯಾಲಯದ ಮಧ್ಯಸ್ಥಿಕೆಯ ನಂತರ ಪ್ರಸ್ತುತ, 11,400 ಕ್ಕೂ ಹೆಚ್ಚು ತ್ಯಾಜ್ಯ ಆಯುವವರಿಗೆ ಔದ್ಯೋಗಿಕ ಗುರುತಿನ ಚೀಟಿಗಳನ್ನು ನೀಡಲಾಗಿದೆ. ಈ ಗುರುತಿನ ಚೀಟಿಗಳಲ್ಲಿ ತ್ಯಾಜ್ಯ ಆಯುವವರ ಮೂಲ ಮಾಹಿತಿ ಇದ್ದು, ಅವರನ್ನು ತ್ಯಾಜ್ಯ ಆಯುವವರು ಎಂದು ಗುರುತಿಸಿ, ನಗರದ ವ್ಯಾಪ್ತಿಯಲ್ಲಿ ತ್ಯಾಜ್ಯ ಸಂಗ್ರಹಿಸಲು ಅವರಿಗೆ ಅಧಿಕಾರ ನೀಡಲಾಗಿದೆ.

ತ್ಯಾಜ್ಯ ಆಯುವವರಿಗೆ ತಮ್ಮ ಸೇವೆಗಳನ್ನು ಸುಧಾರಿಸಲು ಸಹಾಯ ಮಾಡಲು, ಹಸಿರು ದಳ ಸಂಸ್ಥೆಯು ತ್ಯಾಜ್ಯ ನಿರ್ವಹಣೆಯ ವಿವಿಧ ಅಂಶಗಳಾದ ತ್ಯಾಜ್ಯ ಸಂಗ್ರಹಣೆ, ಸಾವಯವ ತ್ಯಾಜ್ಯ ನಿರ್ವಹಣೆ ಮತ್ತು ಮರುಬಳಕೆಯಂತಹ ತರಬೇತಿಯನ್ನು ಅವರಿಗೆ ನೀಡಿತು.

ಗುರುತಿನ ಚೀಟಿ ಮತ್ತು ತರಬೇತಿಯನ್ನು ಪಡೆದು ಸುಸಜ್ಜಿತರಾದ ಹಸಿರು ದಳದ ತ್ಯಾಜ್ಯ ಆಯುವವರು, ಅಧಿಕೃತವಾಗಿ ಮನೆ-ಮನೆಗಳಿಂದ ತ್ಯಾಜ್ಯ ಸಂಗ್ರಹಣೆ, ತ್ಯಾಜ್ಯ ವಿಂಗಡಣೆ ಮತ್ತು ಕಾಂಪೋಸ್ಟ್ ಸೇವೆಗಳನ್ನು ನೀಡಲು ಸ್ಥಳೀಯ ಸರ್ಕಾರದೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳಲು ಸಾಧ್ಯವಾಯಿತು. ಕೆಲವು ತ್ಯಾಜ್ಯ ಆಯುವವರು ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು (DWCC) ನಿರ್ವಹಿಸಲು ಸಾಲವನ್ನು ಪಡೆಯಲು ಸಾಧ್ಯವಾಯಿತು. ತ್ಯಾಜ್ಯ ಸಂಗ್ರಾಹಕರು, ತ್ಯಾಜ್ಯ ಉತ್ಪಾದಕರಿಂದ ಸಂಗ್ರಹಿಸಿದ ತ್ಯಾಜ್ಯವನ್ನು ಡಿಡಬ್ಲ್ಯೂಸಿಸಿಯಲ್ಲಿ ನಾವು ವಿಂಗಡಿಸುತ್ತೇವೆ.

ಉದಾಹರಣೆಗೆ, ಅಲುಮೇಲು ಅವರು ರಸ್ತೆಬದಿ ಮತ್ತು ಡಂಪ್‌ಯಾರ್ಡ್‌ಗಳಿಂದ ತ್ಯಾಜ್ಯವನ್ನು ಸಂಗ್ರಹಿಸುವುದರಿಂದ ಹಿಡಿದು, ನೇರವಾಗಿ ಮನೆಗಳಿಂದ ತ್ಯಾಜ್ಯವನ್ನು ಸಂಗ್ರಹಿಸುವವರೆಗೆ ಎಲ್ಲವನ್ನೂ ನೋಡಿದ್ದಾರೆ. ಈಗ ತ್ಯಾಜ್ಯ ಆಯುವವರನ್ನು ಚೆನ್ನಾಗಿ ನಡೆಸಿಕೊಳ್ಳಲಾಗುತ್ತಿದೆ ಎಂದು ಅವರು ಹೇಳುತ್ತಾರೆ.

ಪ್ರಸ್ತುತ, ತ್ಯಾಜ್ಯ ಆಯುವ ಕಾರ್ಯದಲ್ಲಿ ತನ್ನ ಸಹವರ್ತಿಯಾಗಿದ್ದ ಕುಮುದಾ ಅವರು ನಿರ್ವಹಿಸುತ್ತಿರುವ ಮತ್ತು ಮಾಲೀಕತ್ವದ DWCCಯ 12 ತ್ಯಾಜ್ಯ ವಿಂಗಡಣೆದಾರರಲ್ಲಿ ಅಲುಮೇಲು ಅವರು ಒಬ್ಬರಾಗಿದ್ದಾರೆ. "ಈಗ ಕೆಲಸವು ತುಂಬಾ ಸುಲಭವಾಗಿದೆ. ನಾವು DWCC ಗೆ ಬರುವ ತ್ಯಾಜ್ಯವನ್ನು ವಿಂಗಡಿಸುತ್ತೇವೆ. ನಾವು ಬೆಳಿಗ್ಗೆ 9 ಗಂಟೆಗೆ ಕೆಲಸವನ್ನು ಪ್ರಾರಂಭಿಸುತ್ತೇವೆ ಮತ್ತು ಸಂಜೆ 5 ಗಂಟೆಯ ವೇಳೆಗೆ ಕೆಲಸ ಮುಗಿಸುತ್ತೇವೆ. ಕೆಲವೊಮ್ಮೆ ನಾವು ಸಂಜೆ 6 ಗಂಟೆಯ ವರೆಗೂ ಕೆಲಸವನ್ನು ವಿಸ್ತರಿಸುತ್ತೇವೆ. ಇದರಿಂದಾಗಿ ನಮ್ಮ ಆದಾಯವೂ ಉತ್ತಮವಾಗಿದೆ" ಎಂದು ಅಲುಮೇಲು ಅವರು ಸಂತಸ ಪಟ್ಟರು.

ಗುರುತಿನ ಚೀಟಿಗಳ ಕಾರಣದಿಂದಾಗಿ, ತ್ಯಾಜ್ಯ ಆಯುವವರ ಮಕ್ಕಳೂ ಈಗ ಗುರುತನ್ನು ಹೊಂದಿದ್ದಾರೆ. ಇದರಿಂದಾಗಿ ಅವರ ಮಕ್ಕಳಿಗೆ ಶಾಲೆಗೆ ಹೋಗಲು ಸಾಧ್ಯವಾಗುತ್ತಿದೆ. ಇದಲ್ಲದೆ, ಅವರು ಬ್ಯಾಂಕ್ ಖಾತೆಗಳನ್ನು ತೆರೆಯಲು, ಪಿಂಚಣಿ ಮತ್ತು ತಮ್ಮ ಮಕ್ಕಳಿಗೆ ವಿದ್ಯಾರ್ಥಿವೇತನದಂತಹ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಈಗ ಸಮರ್ಥರಾಗಿದ್ದಾರೆ.

ಇಲ್ಲಿಯವರೆಗೆ, ಹಸಿರು ದಳ ಸಂಸ್ಥೆಯು ಸುಮಾರು 20,000 ತ್ಯಾಜ್ಯ ಆಯುವವರ ಜೀವನವನ್ನು ಪರಿವರ್ತಿಸಿದೆ. 2021-2022 ರಲ್ಲಿ, ಹಸಿರು ದಳ ಸಂಸ್ಥೆಯು 16,169 ತ್ಯಾಜ್ಯ ಆಯುವವರಿಗೆ ಸಾಮಾಜಿಕ ಸೇವೆಗಳ ಸೌಲಭ್ಯಗಳನ್ನು, ತ್ಯಾಜ್ಯ ಆಯುವವರ ಮಕ್ಕಳು ಮತ್ತು ಮೊದಲ ತಲೆಮಾರಿನ ಶಿಕ್ಷಣವಂಚಿತರಿಗೆ ಮರು-ಪ್ರವೇಶ ಸೇರಿದಂತೆ ಒಟ್ಟು 272 ಮಕ್ಕಳಿಗೆ ಶಾಲಾ ಪ್ರವೇಶಾತಿಗಳನ್ನು, 1,597 ವಿದ್ಯಾರ್ಥಿವೇತನಗಳು ಮತ್ತು ಶೈಕ್ಷಣಿಕ ಸಾಲಗಳನ್ನು ಒದಗಿಸಿದೆ.

## ಗುರುತಿನ ಚೀಟಿಗಳ :

ಗುರುತಿನ ಚೀಟಿಯನ್ನು ನೀಡುವ ಮೂಲಕ ಸ್ಥಳೀಯಾಡಳಿತದಿಂದ ದೊರೆತ ಮಾನ್ಯತೆಯಿಂದಾಗಿ ತ್ಯಾಜ್ಯ ಆಯುವವರ ಬದುಕು ಬದಲಾಯಿತು. ಇದು ನಳಿನಿ ಅವರಿಗೆ ಸಂತೋಷವನ್ನುಂಟು ಮಾಡುತ್ತಿದ್ದರೂ, "ಅವರ ಕೆಲಸವು ಈಗಷ್ಟೇ ಪ್ರಾರಂಭವಾಗಿದೆ. ಇನ್ನೂ ಮಾಡಬೇಕಾಗಿರುವುದು ತುಂಬಾ ಇದೆ" ಎಂಬ ಸಂಗತಿಯೂ ಅವರಿಗೆ ತಿಳಿದಿದೆ.

ನಳಿನಿ ಅವರ ಮುಂದಿನ ಹೆಜ್ಜೆಯು ತ್ಯಾಜ್ಯ ಆಯುವವರಿಗೆ ಸ್ವಂತ ಮನೆಗಳನ್ನು ಹೊಂದಲು ಸಹಾಯ ಮಾಡುವುದಾಗಿದೆ.

"ವಸತಿ ಮುಖ್ಯವಾಗಿದ್ದು, ಸ್ವಂತ ಮನೆಯಿಂದಾಗಿ ಜೀವನದಲ್ಲಿ ಸಾಕಷ್ಟು ಸ್ಥಿರತೆಯನ್ನು ಹೊಂದಲು ಸಾಧ್ಯವಾಗುತ್ತದೆ. ಇದು [ತ್ಯಾಜ್ಯ ಆಯುವವರ] ಮಕ್ಕಳಿಗೆ ಭದ್ರತೆಯನ್ನು [ಮತ್ತು ಅವಕಾಶಗಳನ್ನು] ಒದಗಿಸುತ್ತದೆ. ಆದ್ದರಿಂದ ನಾವು ಇದರ ಬಗ್ಗೆ ಸಾಕಷ್ಟು ಕೆಲಸ ಮಾಡಿದ್ದೇವೆ. ಈಗಿರುವ ಅವರ ಮನೆಗಳನ್ನು ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಬಳಸಿ ನವೀಕರಿಸುತ್ತಿದ್ದೇವೆ. ಇದರಿಂದಾಗಿ ಮನೆ ನಿರ್ಮಾಣದ ವೇಳೆ ಉಂಟಾಗುವ ಪರಿಸರ ಮಾಲಿನ್ಯದ ಪ್ರಮಾಣವೂ ಕಡಿಮೆಯಾಗಿದೆ" ಎನ್ನುತ್ತಾರೆ ನಳಿನಿ.

ಆರ್ಕಿಟೆಕ್ಟ್ ಮತ್ತು ಡಿಸೈನರ್ ಆಗಿರುವ ಕಾರ್ತಿಕ್ ನಟರಾಜನ್ ಅವರು 2018ರಲ್ಲಿ ನಮ್ಮ ವಸತಿ ಯೋಜನೆಯನ್ನು ಮೇಲ್ವಿಚಾರಣೆ ಮಾಡಲು ಹಸಿರು ದಳ ಸಂಸ್ಥೆಗೆ ಸೇರಿಕೊಂಡರು. ಇದು ಕೇವಲ ಮೂರು ತಿಂಗಳ ಅಲ್ಪಾವಧಿಯ ಒಪ್ಪಂದವಾಗಿತ್ತು. ಆದರೆ ಯಾವಾಗಲೂ ಹೊಸದನ್ನು ಹುಡುಕುವ, ನಾವಿನ್ಯತೆಯೆಡೆಗೆ ತುಡಿಯುವ ಕಾರ್ತಿಕ್ ಅವರು, ಹಸಿರು ದಳ ಸಂಸ್ಥೆಯ ಪ್ರಾಯೋಗಿಕ ಯೋಜನೆಗಳನ್ನು ನಿರ್ವಹಿಸಲು ಸ್ವತಃ ಇನ್ನಷ್ಟು ಕಾಲ ಸಂಸ್ಥೆಯೊಂದಿಗೆ ತೊಡಗಿಕೊಂಡರು. ಕಳೆದ ನಾಲ್ಕು ವರ್ಷಗಳಿಂದ ಅವರು ಹಸಿರು ದಳ ಸಂಸ್ಥೆಯ ಜೊತೆಯಲ್ಲಿದ್ದು, ಈಗಲೂ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಕಾರ್ತಿಕ್ ನಟರಾಜನ್ ಅವರು, ತ್ಯಾಜ್ಯ ನಿರ್ವಹಣೆಯಲ್ಲಿ ಕೆಲಸ ಮಾಡುವವರ ಆರೋಗ್ಯದ ಪರಿಣಾಮಗಳನ್ನು ಕಡಿಮೆ ಮಾಡುವ ಯೋಜನೆಗಳ ಮೇಲ್ವಿಚಾರಣೆ ಮಾಡುತ್ತಿದ್ದಾರೆ.

ಕಾರ್ತಿಕ್ ಅವರ ಪ್ರಕಾರ, ಹಸಿರು ದಳ ಸಂಸ್ಥೆಯು ತ್ಯಾಜ್ಯವನ್ನು ಆಯುವವರಿಗೆ ಜೀವನೋಪಾಯ ವೇತನ ಮತ್ತು ಅವರೊಂದಿಗೆ ಜೊತೆಗೂಡಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಸಾಮಾಜಿಕ ಭದ್ರತಾ ಸೇವೆಗಳಿಗೆ ಪ್ರವೇಶ ಪಡೆಯಲು ಸಹಾಯ






ಮಾಡುತ್ತದೆ. ತ್ಯಾಜ್ಯ ಆಯುವವರು ತಮ್ಮದೇ ಆದ ಆಲೋಚನೆಗಳೊಂದಿಗೆ ಬರುತ್ತಾರೆ. ಆಗ ಪರಿಹರಿಸಬೇಕಾದ ಸಮಸ್ಯೆಯಿದ್ದರೆ, ನಾವು ಕೆಲಸ ಮಾಡಲು ಬಯಸುವ ಕ್ಷೇತ್ರವಿದ್ದರೆ, ಅವರೊಂದಿಗೆ ಜೊತೆಗೂಡಿ ಕೆಲಸ ಮಾಡಲು ನಾವು ಕಾರ್ಯವಿಧಾನಗಳು ಮತ್ತು ಹೊಸ ಮಾರ್ಗಗಳನ್ನು ಕಂಡುಕೊಳ್ಳುತ್ತೇವೆ. ಆದರೆ ಸಮುದಾಯ ನೇತೃತ್ವದ ಮಧ್ಯಸ್ಥಿಕೆಗಳ ಈ ಸ್ವರೂಪವು ಔಪಚಾರಿಕ ವ್ಯಾಪಾರಗಳಲ್ಲಿ ಸಾಧ್ಯವಾಗುವುದಿಲ್ಲ. ಏಕೆಂದರೆ ಸಮುದಾಯ ನೇತೃತ್ವದ ಸರ್ಕಾರದ ಪ್ರಾಯೋಗಿಕ ಮಾದರಿಗಳಲ್ಲಿ ಉದ್ಯಮಗಳು ಹೂಡಿಕೆ ಮಾಡುವುದಿಲ್ಲ. ಎಂದು ಅವರು ಹೇಳದರು.

ನಿರ್ದಿಷ್ಟವಾಗಿ ನಾವು ತ್ಯಾಜ್ಯ ಆಯುವವರಿಗೆ ಅನೌಪಚಾರಿಕ ಕೈಗಾರಿಕೆಗಳಿಂದ ಔಪಚಾರಿಕ ಕೈಗಾರಿಕೆಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದ್ದೇವೆ. ಈ ಅಂತರವನ್ನು ಕಡಿಮೆ ಮಾಡಲು ತ್ಯಾಜ್ಯ ಆಯುವವರು ಹೇಗೆ ತೊಡಗಿಸಿಕೊಳ್ಳಬೇಕೆಂದು ಬಯಸುತ್ತಾರೋ, ಅದೇ ರೀತಿಯಲ್ಲಿ ನಮ್ಮ ವಿವಿಧ ಕಾರ್ಯಕ್ರಮಗಳು ರೂಪಗೊಂಡಿವೆ.

ಇದರೊಂದಿಗೆ ನಾವು ಹಸಿರು ದಳ ಸಂಸ್ಥೆಯೊಳಗೆ ಔಪಚಾರಿಕ ವ್ಯವಸ್ಥೆಯೊಂದನ್ನು ನಿರ್ಮಿಸಿದ್ದೇವೆ. ನಾವು ಅವರಿಗೆ "ನಿಮ್ಮ ಈ ಕೆಲಸವನ್ನು ಮಾಡಲು, ನಮಗೆ ನಿಮ್ಮ ಅವಶ್ಯಕತೆ ಇದ್ದು, ಬದಲಾಗಿ ನಾವು ನಿಮಗೆ ಕೆಲವು ರೀತಿಯ ಸ್ಥಿರತೆ ಹಾಗೂ ಮೂಲಸೌಕರ್ಯದಲ್ಲಿ ಹಣಕಾಸಿನ ನೆರವು ನೀಡುತ್ತೇವೆ" ಎಂದು ಹೇಳುತ್ತಾವೆ". ಆರಂಭದಲ್ಲಿ ಹಸಿರು ದಳ ಸಂಸ್ಥೆಯು ಯೋಜನೆಯನ್ನು ಬೆಂಬಲಿಸುವ ದೃಷ್ಟಿಯಿಂದ ಅವರ ಜೊತೆಗೂಡಿ ಯೋಜನೆಯನ್ನು ಮುನ್ನಡೆಸಲು ಸಹಾಯ ಮಾಡುತ್ತದೆ. ಒಂದು ಹಂತದ ನಂತರ ಯೋಜನೆಯು ತಾನಾಗಿಯೇ ಮುನ್ನಡೆಯುವ ಹಂತಕ್ಕೆ ಬಂದಾಗ, ನಾವು ಅದನ್ನು ತ್ಯಾಜ್ಯ ಆಯುವವರಿಗೆ ಹಸ್ತಾಂತರಿಸುತ್ತೇವೆ. ಆಗ ಅವರೇ ಆ ವ್ಯಾಪಾರದ ಮಾಲೀಕರು ಮತ್ತು ನಿರ್ವಾಹಕರಾಗುತ್ತಾರೆ. ತದನಂತರ ಅವರು ತಮ್ಮ ವ್ಯಾಪಾರವನ್ನು ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ವಿಸ್ತರಣೆ ಮಾಡಬಹುದು ಎಂದು ಕಾರ್ತಿಕ ಅವರು ವಿವರಿಸಿದರು.

ಹಸಿರು ದಳ ಸಂಸ್ಥೆಯು ಇಲ್ಲಿಯವರೆಗೆ ರೂಪಿಸಿರುವ ಪ್ರಮುಖ ಪ್ರಾಯೋಗಿಕ ಯೋಜನೆಗಳು, ಜವಳಿ ತ್ಯಾಜ್ಯ, ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳಿಗೆ ಸೌರ ದೀಪಗಳು ಮತ್ತು ಫ್ಯಾನ್‌ಗಳ ಬಳಕೆ ಹಾಗೂ ಮಲ್ಟಿಲೇಯರ್ ಪ್ಲಾಸ್ಟಿಕ್‌ನಿಂದ (MLP) ಬೋರ್ಡ್‌ಗಳ ಉತ್ಪಾದನೆಯನ್ನು ಒಳಗೊಂಡಿರುತ್ತದೆ.

ಈ ಪ್ರಾಯೋಗಿಕ ಯೋಜನೆಗಳಲ್ಲಿ ಬೇರೆಯವರ ಬದಲಿಗೆ ತ್ಯಾಜ್ಯ ಆಯುವವರೇ ಹೆಚ್ಚು ತೊಡಗಿಸಿಕೊಂಡಿರುವುದರಿಂದ ಇದು ಉತ್ತಮ ಯಶಸ್ಸು ಕಂಡಿದೆ ಎಂದು ನಾವು ಭಾವಿಸುತ್ತೇವೆ. ತ್ಯಾಜ್ಯ ಆಯುವ ಕಾರ್ಯವನ್ನು ವೃತ್ತಿಯಾಗಿ ನಾವು ಪರಿಗಣಿಸಿದರೆ, ತ್ಯಾಜ್ಯ ಆಯುವವರಿಗೆ ಮೇಲ್ಮುಖ ಚಲನಶೀಲತೆಯನ್ನು ಖಾತರಿಪಡಿಸುವ ಜವಾಬ್ದಾರಿಯನ್ನು ನಾವು ಹೊಂದಿದ್ದೇವೆ. ಅದನ್ನು ಮಾಡಲು ಸಾಧ್ಯವಾಗದಿದ್ದರೆ ಉದ್ಯಮಗಳು ಅರ್ಥಹೀನವಾಗುತ್ತವೆ" ಎಂದು ಅವರು ಹೇಳಿದರು.

ವಿಶೇಷವಾಗಿ ತ್ಯಾಜ್ಯ ಆಯುವವರ ಜೀವನೋಪಾಯವನ್ನು ಸುಧಾರಿಸಲು, ಹಸಿರು ದಳ ಸಂಸ್ಥೆಯು ಅವರನ್ನು ಬೆಂಬಲಿಸುತ್ತಿರುವಾಗ, "ತ್ಯಾಜ್ಯ ಆಯುವವರ ಸುಸ್ಥಿರತೆ ಮತ್ತು ಉದ್ಯಮಶೀಲತಾ ಮನೋಭಾವದ ವೈಭವೀಕರಣ"ದ ನಿರೂಪಣೆಯ ವಿರುದ್ಧ ಕಾರ್ತಿಕ್ ಎಚ್ಚರಿಸಿದ್ದಾರೆ.

"ನಾನು ಈ ನಿರೂಪಣೆಯನ್ನು ಗಮನಿಸಿದ್ದೇನೆ" ಎಂದ ಅವರು, ತ್ಯಾಜ್ಯ ಆಯುವವರು ನಿರಂತರವಾಗಿ ಹೋರಾಡುತ್ತಾ, ವಿಕಸನಗೊಳ್ಳುವ ರೀತಿಯಲ್ಲಿ ಈ ಜಗತ್ತನ್ನು ರಚಿಸಲಾಗಿದೆ. ಈ ನಿರೂಪಣೆಯು ಉದ್ಯಮಶೀಲತಾ ಮನೋಭಾವದಿಂದ ಬದಲಾದರೆ ನಾನು ಅದನ್ನು ಸ್ವಾಗತಿಸುತ್ತೇನೆ. ಅದು ಅಸ್ತಿತ್ವದಲ್ಲಿಲ್ಲ ಎಂದು ಹೇಳಲು ಅಲ್ಲ ; ಬದಲಾಗಿ ಅವರು ಏಕೆ ಅಲ್ಲಿದ್ದಾರೆ ಎಂಬುದನ್ನು ಒತ್ತಿಹೇಳಲು. ನಾವು ನಿಜವಾಗಿಯೂ ಅವರ ದೃಷ್ಟಿಕೋನವನ್ನು ಏಕೆ ಕೇಳಬೇಕು ಎಂದು ಅವರು ವಿವರಿಸಿದರು.

ತ್ಯಾಜ್ಯ ಆಯುವವರು ಮಾಡುವ ಕೆಲಸವು ತುಂಬಾ ಪ್ರಭಾವಶಾಲಿಯಾಗಿದ್ದು, ಅವರು ಉತ್ತಮ ಪರಿಹಾರವನ್ನು ಪಡೆಯಲು ಅರ್ಹರಾಗಿದ್ದಾರೆ ಎಂದು ಕಾರ್ತಿಕ್ ಅವರು ಒತ್ತಿ ಹೇಳಿದರು. "ಅವರು ಅಗಾಧವಾದ ಶಕ್ತಿಯನ್ನು ಮತ್ತು ಅಪಾರ ಸಾಮರ್ಥ್ಯವನ್ನು ಹೊಂದಿದ್ದಾರೆ. ವಸ್ತುಗಳ ಬಗ್ಗೆ ಉತ್ತಮ ತಿಳುವಳಿಕೆಯನ್ನು ಕೂಡಾ ಹೊಂದಿದ್ದು, ಆದರೆ ಅದನ್ನು ನಾವು ಇನ್ನೂ ಸಂಪೂರ್ಣವಾಗಿ ದಾಖಲಿಸುವ ಕಾರ್ಯವಿಧಾನವನ್ನು ಹೊಂದಿಲ್ಲ. ಇನ್ನು ನಾವು ಯಾವಾಗಲೂ ನಮ್ಮ ತಂಡದಲ್ಲಿ ಹೇಳುತ್ತೇವೆ, "ನೀವು ಈ ಗ್ರಹಕ್ಕಾಗಿ ಪ್ರಮುಖವಾದ ಕೆಲಸವನ್ನು ಮಾಡುತ್ತಿದ್ದರೇ.. ಅದಕ್ಕೆ ತಕ್ಕ ಮಟ್ಟಿನ ಪರಿಹಾರವನ್ನು ನಿಮಗೆ ಕೊಡಲಾಗಿದೆಯೇ..? ಎಂದು ಅವರು ಪ್ರಶ್ನಿಸಿದರು.

ಹಸಿರು ದಳದ ಪ್ರಕಾರ, ಸರಾಸರಿಯಾಗಿ, ಒಬ್ಬ ತ್ಯಾಜ್ಯ ಆಯುವ ಕಾರ್ಮಿಕ ದಿನಕ್ಕೆ ಸುಮಾರು 60-90 ಕಿಲೋಗ್ರಾಂಗಳಷ್ಟು ತ್ಯಾಜ್ಯವನ್ನು ಸಂಗ್ರಹಿಸುತ್ತಾನೆ. ಹೀಗೆ ಒಟ್ಟಾರೆಯಾಗಿ, ಬೆಂಗಳೂರಿನ 15,000 ತ್ಯಾಜ್ಯ ಆಯುವವರು ವಾರ್ಷಿಕವಾಗಿ ನಗರಕ್ಕೆ 84 ಕೋಟಿಗಳನ್ನು (INR 840 ಮಿಲಿಯನ್ ಅಥವಾ USD 10.2 M) ಉಳಿಸುತ್ತಿದ್ದಾರೆ.

ಆದರೆ ಅವರ ಆರ್ಥಿಕ ಕೊಡುಗೆಗಳಿಗಿಂತ ಹೆಚ್ಚಾಗಿ, ಜಾಗತಿಕ ಹವಾಮಾನ ಬದಲಾವಣೆಯ ಸಮಸ್ಯೆಯ ನಿವಾರಣೆಗೆ ತ್ಯಾಜ್ಯ ಆಯುವವರು ನೀಡುತ್ತಿರುವ ಪ್ರಮುಖ ಕೊಡುಗೆಯೂ ಸಾಮಾನ್ಯವಾಗಿ ಕಡೆಗಣಿಸಲ್ಪಟ್ಟಿದೆ. ತ್ಯಾಜ್ಯವು ಶೇ.20ರಷ್ಟು ಮೀಥೇನ್ ಹೊರಸೂಸಿ, ಪರಿಸರವನ್ನು ಮಲಿನಗೊಳಿಸುತ್ತದೆ. ಆದರೆ ತ್ಯಾಜ್ಯವನ್ನು ನಿರ್ವಹಿಸುವ ಮೂಲಕ ಮತ್ತು ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಸಂಗ್ರಹಿಸುವ ಮೂಲಕ, ತ್ಯಾಜ್ಯ ಆಯುವವರು, ತ್ಯಾಜ್ಯವನ್ನು ನೆಲಭರ್ತಿ ಅಥವಾ ಇನ್ಸಿನರೇಟರ್‌ಗಳಿಗೆ ಹೋಗದಂತೆ ತಡೆಯುತ್ತಿದ್ದಾರೆ. ಇದು ಮೀಥೇನ್ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ಅದೃಷ್ಟವಶಾತ್, ತ್ಯಾಜ್ಯ ಆಯುವವರು, ತಮ್ಮ ಕೆಲಸದ ಮೂಲಕ ಹವಾಮಾನ ಬದಲಾವಣೆಯಿಂದ ಉಂಟಾಗುವ ಹೆಚ್ಚಿನ ಹಾನಿಯನ್ನು ತಗ್ಗಿಸಲು ಕೊಡುಗೆ ನೀಡುತ್ತಿದ್ದಾರೆ ಎಂಬುದನ್ನು ಅರಿತುಕೊಂಡರು. ನಂತರ ಅವರು ಮೂಲೆಗುಂಪಾಗಿ ಕೂಡದೇ, ಈಗ ಅವರು ತಮ್ಮ ಬೇಡಿಕೆಗಳನ್ನು ಕೇಳಬೇಕೆಂದು ಒತ್ತಾಯಿಸುತ್ತಿದ್ದಾರೆ. "ಅವರು ತಮ್ಮ ವೃತ್ತಿಯ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಸಿದ್ಧರಾಗಿದ್ದಾರೆ. ಅವರು ತಮ್ಮ ಕೆಲಸದ ಮೂಲಕ, ತಮ್ಮ ಸಮುದಾಯ ಮತ್ತು ಕುಟುಂಬದಲ್ಲಿ ಬದಲಾವಣೆ ತರುವುದಲ್ಲದೇ, ಹವಾಮಾನ ತಗ್ಗಿಸುವಿಕೆಗೂ ಹೆಚ್ಚಿನ ಕೊಡುಗೆ ನೀಡುತ್ತಿದ್ದಾರೆ" ಎಂದು ನಳಿನಿ ಹೇಳಿದರು.

"ತ್ಯಾಜ್ಯ ಆಯುವವರು ಈಗ ತಮ್ಮ ಹಕ್ಕುಗಳ ಬಗ್ಗೆ ಮಾತನಾಡುತ್ತಿದ್ದಾರೆ. ಈ ಹಿಂದೆ, ಅವರು ಜನರು ತಮ್ಮ ಬಗ್ಗೆ ಯಾವುದೇ ರೀತಿಯಲ್ಲಿ ಮಾತನಾಡಲು ಬಿಡುತ್ತಿದ್ದರು. ಆದರೆ ಈಗ ಅವರು ತಮ್ಮ ಬಗ್ಗೆಯೇ ಮಾತನಾಡುತ್ತಾರೆ. ಅವರ ಕೊಡುಗೆಯು ನಗರಕ್ಕೆ ಆರ್ಥಿಕವಾಗಿ ಸಹಾಯ ಮಾಡಿದೆ ಎಂದು ಅವರು ತಿಳಿದಿದ್ದಾರೆ. ಆದ್ದರಿಂದ ಅವರು [ತಮ್ಮ ಬಗ್ಗೆ] ತುಂಬಾ ಹೆಮ್ಮೆಪಡುತ್ತಾರೆ. "ನಾವು ನಗರಕ್ಕೆ ಕೊಡುಗೆ ನೀಡುತ್ತೇವೆ. ನಾವು ಪರಿಸರವನ್ನು ರಕ್ಷಿಸುತ್ತೇವೆ. ನಾವು ಕೆಲಸ ಮಾಡುವುದನ್ನು ನಿಲ್ಲಿಸಿದರೆ ಎಲ್ಲೆಂದರಲ್ಲಿ ತ್ಯಾಜ್ಯದ ರಾಶಿಗಳು ಕಂಡುಬರುತ್ತವೆ. ನಗರವು ಮಲಿನವಾಗಿ, ದುರ್ವಾಸನೆಹರಡುತ್ತದೆ. ತ್ಯಾಜ್ಯದಿಂದ ಜನರು ಅನಾರೋಗ್ಯಕ್ಕೆ ಒಳಗಾಗುತ್ತಾರೆ," ಎಂದು ಅಲುಮೇಲು ನೆನಪಿಸಿದರು.

# STREE MUKTI SANGHATANA
# ಸ್ತ್ರೀ ಮುಕ್ತಿ ಸಂಘಟನೆ

## ಮಹಿಳೆಯರಿಗೆ ಮಹಿಳೆಯರ ಬೆಂಬಲ

57 ವರ್ಷದ ಸುಶೀಲಾ ಮೋಕಲ್ ಅವರು ಕೇವಲ ಎಂಟು ವರ್ಷದವರಾಗಿದ್ದಾಗ ತ್ಯಾಜ್ಯ ಆಯಲು ಪ್ರಾರಂಭಿಸಿದರು. ಅವರ ತಂದೆ ಅಪಘಾತದಿಂದಾಗಿ ನಿಧನರಾದರು. ಆಗ ಅವರಿಗೆ ತನ್ನನ್ನು ಹಾಗೂ ತಾಯಿಯನ್ನು ರಕ್ಷಿಸಿಕೊಳ್ಳುವುದರ ಜೊತೆಗೆ ಅವರ ಕಿರಿಯ ಸೋದರರನನ್ನು ಸಾಕುವ ಅನಿವಾರ್ಯತೆ ಒದಗಿತು. ಕುಟುಂಬಕ್ಕೆ ಯಾವುದೇ ಬೆಂಬಲ ಲಭ್ಯವಿಲ್ಲದ ಕಾರಣ, ಅವರು ವಾಸಿಸುವ ಸ್ಥಳಕ್ಕೆ ಹತ್ತಿರದಲ್ಲೇ ಇದ್ದ ದೊಡ್ಡ ಸಾರ್ವಜನಿಕ ಮಾರುಕಟ್ಟೆಯಿಂದ ತ್ಯಾಜ್ಯವನ್ನು ಸಂಗ್ರಹಿಸಲು, ಅವರ ತಾಯಿಗೆ ಅವರ ಕಿರಿಯ ಸಹೋದರರನನ್ನು ಅವರೊಂದಿಗೆ ಕರೆದುಕೊಂಡು ಹೋಗುವುದನ್ನು ಬಿಟ್ಟು ಬೇರೆ ವಿಧಿ ಇರಲಿಲ್ಲ.

ತ್ಯಾಜ್ಯ ಆಯುವವರು ತಮ್ಮ ಕೆಲಸದ ಪ್ರದೇಶದಲ್ಲಿ ಅನುಭವಿಸುವ ಸಾಮಾನ್ಯ ಸವಾಲುಗಳು ಒಂದು ಭಾಗವಾದರೆ, ಇನ್ನೊಂದೆಡೆ ಜನರು ಮತ್ತು ಅಧಿಕಾರಿಗಳು ತಮ್ಮ ಸಂಗ್ರಹಿಸಿದ ತ್ಯಾಜ್ಯವನ್ನು ರಸ್ತೆಯ ಬದಿಗಳಲ್ಲಿ ಹಾಕಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ಮತ್ತೊಂದು ಸಮಸ್ಯೆ ಸೃಷ್ಟಿಸಿದರು. ಈ ಸಮಸ್ಯೆಯಿಂದಾಗಿ ಅವರ ತಾಯಿಗೆ ತ್ಯಾಜ್ಯ ಸಂಗ್ರಹಿಸಲು ಪಡೆದಿದ್ದ ಮುಂಗಡ ಹಣವನ್ನು ಹಿಂದಿರುಗಿಸಲು ಸಾಧ್ಯವಾಗಲಿಲ್ಲ. ಆಗ ತನ್ನ ತಾಯಿಯಲ್ಲಿ ಅನಗತ್ಯ ಆಸಕ್ತಿ ತೋರಿದ ಪರಪುರುಷರ ಕಿರುಕುಳವನ್ನು ಸಹಿಸಿಕೊಂಡರು. ನಂತರ ನನ್ನ ತಾಯಿ ತನ್ನ ಕೆಲಸದ ಮೇಲೆ ಗಮನ ಕೇಂದ್ರೀಕರಿಸಿದಳು. ನನ್ನ ತಾಯಿ ಎಂದಿಗೂ ಮರುಮದುವೆಯಾಗಲಿಲ್ಲ ಎಂದು ಸುಶೀಲಾ ನೆನಪಿಸಿಕೊಂಡರು.

ಅವರು ಎದುರಿಸಿದ ಕಷ್ಟಗಳಿಂದಾಗಿ, ಸುಶೀಲಾ ಅವರು 12 ವರ್ಷದವಳಿದ್ದಾಗ ಮದುವೆಯಾದರು. ಆಕೆಯ ಪತಿ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. ಸುಶೀಲಾ ತ್ಯಾಜ್ಯ ಆಯುವುದನ್ನು ಮುಂದುವರೆಸಿದರು. ಜೀವನವು ಕಷ್ಟಕರವಾಗಿತ್ತು, ಆದರೆ ಅದನ್ನು ನಿಭಾಯಿಸುವಲ್ಲಿ ಅವರು ಯಶಸ್ವಿಯಾದರು.

1998ರಲ್ಲಿ, ಅಂದರೆ ತ್ಯಾಜ್ಯ ಸಂಗ್ರಹಣೆಯಲ್ಲಿ ತೊಡಗಿಸಿಕೊಂಡು ಅನೇಕ ವರ್ಷಗಳಾದ ನಂತರ, ಸುಶೀಲಾ ಅವರ ಪರಿಸ್ಥಿತಿ ಬದಲಾಗತೊಡಗಿತು. "ಸ್ತ್ರೀ ಮುಕ್ತಿ ಸಂಘಟನೆ ಅಥವಾ ಎಸ್ಎಂಎಸ್ ಎಂಬ ಸಂಘಟನೆಯ ಸಂಯೋಜಕರು ನಮ್ಮ ಸಮುದಾಯದ ಸ್ಲಮ್‌ಗಳೊಳಗೆ ಬಂದು, ಅವರೊಂದಿಗೆ ಸೇರಲು ನನಗೆ ಮನವರಿಕೆ ಮಾಡಿದರು" ಎಂದು ಸುಶೀಲಾ ಅವರು ಹೇಳಿದರು.

ಸುಶೀಲಾ ಅವರು ಸಂಸ್ಥೆಯ ಸದಸ್ಯೆಯಾಗಿ ಗೊಬ್ಬರ ತಯಾರಿಕೆ, ತೋಟಗಾರಿಕೆ ಸೇರಿದಂತೆ ನಾನಾ ಕೌಶಲ್ಯ ತರಬೇತಿಯನ್ನು ಪಡೆದುಕೊಂಡರು. ಅವರು ಪಡೆದ ತರಬೇತಿಯು ಸುಶೀಲಾಗೆ ಪ್ರಮುಖವೆಂದು ಸಾಬೀತಾಯಿತು. ಶೀಘ್ರದಲ್ಲೇ, ಅವರು ತನ್ನ ಸಮುದಾಯದ ಸದಸ್ಯರಿಗೆ ಅದೇ ವಿಷಯಗಳ ಬಗ್ಗೆ ತರಬೇತಿ ನೀಡ ತೊಡಗಿದರು.

ಇಂದು, ಸುಶೀಲಾ ಅವರು ಸುಮಾರು ನೂರು ತ್ಯಾಜ್ಯ ಆಯುವವರ ಮೇಲ್ವಿಚಾರಣೆ ಮಾಡುತ್ತಾರೆ. ಇದರೊಂದಿಗೆ ಅವರದೇ ಆದ ಸಹಕಾರಿ ಸಂಸ್ಥೆಯ ಕಾರ್ಯದರ್ಶಿಯಾಗಿದ್ದಾರೆ. ಈ ಸಹಕಾರಿ ಸಂಸ್ಥೆಯು ನಿಯಮಿತವಾಗಿ ತ್ಯಾಜ್ಯ ಸಂಗ್ರಹಣೆ ಮತ್ತು ಜೈವಿಕವಾಗಿ ಕೊಳೆಯುವ ತ್ಯಾಜ್ಯದ ಗೊಬ್ಬರಕ್ಕಾಗಿ 14 ಹೌಸಿಂಗ್ ಸೊಸೈಟಿಗಳೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದೆ. ಪ್ರತಿ ಸೊಸೈಟಿಯು 50 ರಿಂದ 100 ಕುಟುಂಬಗಳನ್ನು ಹೊಂದಿದೆ. ಸಮಾಜದ ಗಾತ್ರವನ್ನು ಅವಲಂಬಿಸಿ, ಹೆಚ್ಚಿನವರು ಪ್ರತಿದಿನ ಕನಿಷ್ಠ 50 ಕಿಲೋಗ್ರಾಂಗಳಷ್ಟು ಜೈವಿಕ ವಿಘಟನೀಯ ತ್ಯಾಜ್ಯವನ್ನು ಉತ್ಪಾದಿಸುತ್ತಾರೆ.



### ಸಹಾಯ ಹಸ್ತ :

ಎಸ್ಎಂಎಸ್‌ನ ಸಂಯೋಜಕರು ಸುಶೀಲಾ ಅವರನ್ನು ತಲುಪುವ ಹೊತ್ತಿಗೆ, ಸಂಸ್ಥೆಯು ಅದಾಗಲೇ 25 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿತ್ತು. ವಿಶ್ವಸಂಸ್ಥೆಯು 1975ನೇ ವರ್ಷವನ್ನು "ಅಂತರರಾಷ್ಟ್ರೀಯ ಮಹಿಳಾ ವರ್ಷ"ವೆಂದು ಘೋಷಿಸಿದ ತಕ್ಷಣವೇ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಭಾರತದಲ್ಲಿ ಹಿಂದುಳಿದ ಮಹಿಳೆಯರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ಸ್ತ್ರೀ ಮುಕ್ತಿ ಸಂಘಟನೆ ಎಂಬ ಮಹಿಳಾ ಸಂಘಟನೆಯನ್ನು ಸ್ಥಾಪಿಸಲು, ಮುಂಬೈನ ಯುವ ಮಹಿಳಾ ಕಾರ್ಯಕರ್ತೆಯರ ಗುಂಪನ್ನು ಈ ಘೋಷಣೆಯು ಪ್ರೇರೇಪಿಸಿತು.

ಈಗ ಸುಮಾರು 50 ವರ್ಷ ತುಂಬಿರುವ ಎಸ್ಎಂಎಸ್ ಸಂಘಟನೆಯು, ಸಾವಿರಾರು ಅನುಯಾಯಿಗಳನ್ನು ಹೊಂದಿರುವ ಮಹಾರಾಷ್ಟ್ರ ರಾಜ್ಯದ ಪ್ರಮುಖ ಮಹಿಳಾ ಸಂಘಟನೆಯಾಗಿದೆ. ಸಂಸ್ಥೆಯು ತನ್ನ ಕೌಟುಂಬಿಕ ಸಲಹಾ ಕೇಂದ್ರಗಳು ಮತ್ತು ಡೇ ಕೇರ್ ಕಾರ್ಯಕ್ರಮಗಳ ಮೂಲಕ ಮಹಿಳೆಯರಿಗೆ ಬೆಂಬಲವನ್ನು ನೀಡುತ್ತಿದೆ ಮತ್ತು ರಂಗಭೂಮಿ ಸೇರಿದಂತೆ ವಿವಿಧ ಮಾಧ್ಯಮಗಳನ್ನು ಬಳಸಿಕೊಂಡು ತನ್ನ ಜಾಗೃತಿ ಅಭಿಯಾನಗಳ ಮೂಲಕ ಮಹಿಳಾ ಸಮಸ್ಯೆಗಳ ಬಗ್ಗೆ ತಿಳುವಳಿಕೆಯನ್ನು ಮೂಡಿಸುತ್ತಿದೆ.

ಇನ್ನು 1998ರಲ್ಲಿ, ಪರಿಸರ ಭಗಿನಿಗಳು (ನೆರೆಹೊರೆಯ ಸಹೋದರಿಯರು) ಮತ್ತು ತ್ಯಾಜ್ಯವನ್ನು ಆಯುವವರ ದುಸ್ಥಿತಿಯ ಕಡೆಗೆ ಎಸ್ಎಂಎಸ್ ತನ್ನ ಗಮನವನ್ನು ಹರಿಸಿತು. ಭಾರತದಲ್ಲಿ ತ್ಯಾಜ್ಯ ತೆಗೆಯುವವರ ಸಂಖ್ಯೆಯು 1.5 ಮಿಲಿಯನ್ ರಿಂದ 5 ಮಿಲಿಯನ್ ನಡುವೆ ಇರಬಹುದೆಂದು ಅಂದಾಜಿಸಲಾಗಿದ್ದು, ಅವರಲ್ಲಿ ಹೆಚ್ಚಿನವರು ಮಹಿಳೆಯರಾಗಿದ್ದಾರೆ.

"ಭಾರತದಲ್ಲಿ ತ್ಯಾಜ್ಯವನ್ನು ಆಯುವ ಮಹಿಳೆಯರು ತ್ಯಾಜ್ಯ ನಿರ್ವಹಣೆಯ ಪಿರಮಿಡ್‌ನ ಕೆಳಸ್ತರದಲ್ಲಿದ್ದಾರೆ. ಅವರು ನಿರಂತರವಾಗಿ ಶೋಷಣೆಗೆ ಒಳಗಾಗುತ್ತಿದ್ದು, ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿದ್ದಾರೆ " ಎಂದು ಎಸ್ಎಂಎಸ್ ಸಂಸ್ಥೆಯ ಸಹ-ಸಂಸ್ಥಾಪಕಿ ಜ್ಯೋತಿ ಮ್ಹಾಪ್ಸೇಕರ್ ಹೇಳಿದರು.

ಜ್ಯೋತಿ ಮ್ಹಾಪ್ಸೇಕರ್ ಅವರ ಪ್ರಕಾರ, ತ್ಯಾಜ್ಯವನ್ನು ಆಯುವುದು ಜಾತಿ ಮತ್ತು ಲಿಂಗ ಆಧಾರಿತವಾಗಿದೆ ; ಬಹುತೇಕ



[1]https://www.georgeinstitute.org/our-impact/policy-and-recommendations/health-and-well-being-of-waste-workers-in-india

[2]https://www.youthkiawaaz.com/2021/09/working-in-waste-a-closer-look-into-the-lives-of-waste-pickers-in-india/




ಎಲ್ಲಾ ತ್ಯಾಜ್ಯ ಆಯುವವರು ದಲಿತ ಸಮುದಾಯಗಳಿಂದ ಬಂದವರು. ಭಾರತೀಯ ಸಮಾಜದಲ್ಲಿ ಅತ್ಯಂತ ತುಳಿತಕ್ಕೆ ಒಳಗಾದ ಸಮುದಾಯವದು. ತ್ಯಾಜ್ಯ ಆಯುವವರಲ್ಲಿ ಹೆಚ್ಚಿನವರು ಅನಕ್ಷರಸ್ಥರು ಮತ್ತು ಒಂಟಿ ಪೋಷಕರಾಗಿದ್ದಾರೆ. ಅವರು ಸದಾ ಆರೋಗ್ಯದ ಅಪಾಯಗಳಿಗೆ ತಮ್ಮನ್ನು ಒಡ್ಡಿಕೊಳ್ಳುತ್ತಾ, ಅನೈರ್ಮಲ್ಯದ ಕೆಲಸದ ಪರಿಸ್ಥಿತಿಗಳಿಂದ ಗಂಭೀರವಾದ ಆರೋಗ್ಯ ಸಮಸ್ಯೆಗಳನ್ನು ಅನುಭವಿಸುತ್ತಾರೆ. ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವ ಅವರು ಹತಾಶಯ ಪರಿಸ್ಥಿತಿಯಲ್ಲಿದ್ದಾರೆ.

ಎಸ್‌ಎಂಎಸ್ ಸಂಸ್ಥೆ ನಡೆಸಿದ ಸಮೀಕ್ಷೆಯು ಈ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ತೋರಿಸಿದೆ : ಬಾಲ್ಯವಿವಾಹ, ಅನಕ್ಷರತೆ, ಋಣಭಾರ ಮತ್ತು ಶೋಷಣೆ, ಮಾತ್ರವಲ್ಲದೇ ಅವರಲ್ಲಿ ಹೆಚ್ಚಿನವರು ವಿಧವೆಯರು, ಮನೆಯಿಂದ ಹೊರಹಾಕಲ್ಪಟ್ಟ ಅಥವಾ ಮದ್ಯಪಾನಕ್ಕೆ ಬಲಿಯಾದವರಾಗಿದ್ದಾರೆ.

ಎಸ್‌ಎಂಎಸ್ ಸಂಸ್ಥೆಯ ನೆರೆಹೊರೆಯ ಅಭಿವೃದ್ಧಿ ಕಾರ್ಯಕ್ರಮಮ, ಪರಿಸರ ವಿಕಾಸ್ ಯೋಜನೆಯನ್ನು ಜಾರಿಗೆ ತಂದಿದ್ದು, ಇದು ಎರಡು ವಿಷಯಗಳನ್ನು ಪರಿಹರಿಸಲು ಪ್ರಯತ್ನಿಸುತ್ತದೆ : (1) ಮಹಿಳಾ ತ್ಯಾಜ್ಯ ಆಯುವವರ ಸಮಸ್ಯೆಗಳು ಮತ್ತು (2) ನಗರದಲ್ಲಿ ಅಸಮರ್ಥ ತ್ಯಾಜ್ಯ ನಿರ್ವಹಣೆ. ಈ ಕಾರ್ಯಕ್ರಮದ ಅಡಿಯಲ್ಲಿ ಸ್ವ-ಸಹಾಯ ಗುಂಪುಗಳ ಸದಸ್ಯರು, ತಮ್ಮ ಸ್ವ-ಸಹಾಯ ಗುಂಪಿನ ಸದಸ್ಯರು ನೀಡಿದ ವಂತಿಕೆಗಳಿಂದ ಸಣ್ಣ ಪ್ರಮಾಣದ ಸಾಲಗಳನ್ನು ಪಡೆಯಲು ಸಾಧ್ಯವಾಗುತ್ತದೆ. 2003ರಲ್ಲಿ, ಎಸ್‌ಎಂಎಸ್ ಸಂಸ್ಥೆಯು ಮುಂಬೈ ಮಹಾನಗರ ಪಾಲಿಕೆಗಾಗಿ ತಲಾ ಐದು ಟನ್ ಸಾಮರ್ಥ್ಯದ ಎರಡು ಜೈವಿಕ ಅನಿಲ ಘಟಕಗಳನ್ನು ನಿರ್ಮಿಸಿತು. ನಂತರ ಬಯೋಮೆಥನೇಶನ್ ಸ್ಥಾವರಗಳನ್ನು ನಿರ್ವಹಿಸಲು ತ್ಯಾಜ್ಯ ಆಯುವವರಿಗೆ ಎಸ್‌ಎಂಎಸ್ ಸಂಸ್ಥೆಯು ತರಬೇತಿಯನ್ನು ನೀಡಿತು. ಎಸ್‌ಎಂಎಸ್ ಸಂಸ್ಥೆಯು ಅದರ ಮುಂದಿನ ವರ್ಷ ಮುಂಬೈನಲ್ಲಿ 2,500 ತ್ಯಾಜ್ಯ ಆಯುವವರನ್ನು ಒಳಗೊಂಡಿರುವ 250 ಸ್ವ-ಸಹಾಯ ಗುಂಪುಗಳ ಒಕ್ಕೂಟವಾದ ಪರಿಸರ ಭಗಿನಿ ವಿಕಾಸ್ ಸಂಘ (PBVS) ಅನ್ನು ರಚಿಸಿತು. ಇದರ ನಂತರ ನವಿ ಮುಂಬೈನಲ್ಲಿ 500 ಸದಸ್ಯರೊಂದಿಗೆ ಸೇರಿ ಪರಿಸರ್ ಸಖಿ ವಿಕಾಸ್ ಸಂಸ್ಥೆ (PSVS)ಯ ರಚನೆಯಾಯಿತು.

ಈ ಎರಡೂ ಒಕ್ಕೂಟಗಳನ್ನು ಒಂಬತ್ತು ಸದಸ್ಯರ ಕಾರ್ಯಕಾರಿ ಸಮಿತಿಯು ಮುನ್ನಡೆಸುತ್ತದೆ (ಇದರಲ್ಲಿ ಎಸ್‌ಎಂಎಸ್ ಸಂಸ್ಥೆಯ ಇಬ್ಬರು ಸಲಹೆಗಾರರು ಇರುತ್ತಾರೆ) ಸಮಿತಿಯ ಸದಸ್ಯರು ಸಮಸ್ಯೆಗಳನ್ನು ಪರಿಹರಿಸುವ ಮಾರ್ಗಗಳನ್ನು ಚರ್ಚಿಸಲು ಪ್ರತಿ ತ್ರೈಮಾಸಿಕಕ್ಕೊಮ್ಮೆ ಭೇಟಿಯಾಗುತ್ತಾರೆ. ಇನ್ನು ಎಸ್‌ಎಂಎಸ್ ಸಂಸ್ಥೆಯ ಮಾರ್ಗದರ್ಶನದಲ್ಲಿ, ಮುಂಬೈನ ಫೆಡರೇಶನ್ ಏಳು ಒಣ ತ್ಯಾಜ್ಯ ಕೇಂದ್ರಗಳನ್ನು ನಿರ್ವಹಿಸುತ್ತದೆ. ಅಲ್ಲಿ ಅವರು ಸಂಗ್ರಹಿಸಿದ ಒಣ ತ್ಯಾಜ್ಯವನ್ನು ಮಾರಾಟಕ್ಕೆ ಬೇಕಾಗುವಷ್ಟು ಪ್ರಮಾಣದವರೆಗೆ ಸಂಗ್ರಹಿಸುತ್ತಾರೆ. ಅದೇ ರೀತಿ ತಡೆರಹಿತ ಕಾರ್ಯಾಚರಣೆಗಳನ್ನು ಖಚಿತಪಡಿಸಿಕೊಳ್ಳಲು ಅವರು ವೈಯಕ್ತಿಕ ಸ್ವ-ಸಹಾಯ ಗುಂಪುಗಳ ಆಂತರಿಕ ಸಾಲ ಚಟುವಟಿಕೆಗಳನ್ನೂ ಮೇಲ್ವಿಚಾರಣೆ ಮಾಡುತ್ತಾರೆ. ಇದಲ್ಲದೆ, ಅಗತ್ಯವಿರುವ ಸದಸ್ಯರಿಗೆ ಆರ್ಥಿಕ ಸಹಾಯವನ್ನು ನೀಡುತ್ತಾರೆ. ಇದರೊಂದಿಗೆ ನಾಯಕತ್ವದ ಕೌಶಲ್ಯ ಮತ್ತು ಮಿಶ್ರಗೊಬ್ಬರ, ಜೈವಿಕ-ಮೆಥೆನೇಶನ್, ತೋಟಗಾರಿಕೆ ಮತ್ತು ಒಣ ತ್ಯಾಜ್ಯವನ್ನು ಉತ್ತಮವಾಗಿ ವಿಂಗಡಿಸುವಂತಹ ಪರ್ಯಾಯ ಕೌಶಲ್ಯಗಳ ತರಬೇತಿಯನ್ನು ಕೂಡಾ ನೀಡುತ್ತಾರೆ.

ಇನ್ನು ಪಿಬಿವಿಎಸ್ ಸಂಸ್ಥೆಯ ಸದಸ್ಯರು ಕೂಡಾ ಸಹಕಾರ ಸಂಸ್ಥೆಗಳನ್ನು ರಚಿಸಿದರು ಮತ್ತು ಅವುಗಳನ್ನು ತಮ್ಮ ರಾಜ್ಯ ಸರ್ಕಾರದ ಅಡಿಯಲ್ಲಿ ನೋಂದಾಯಿಸಿದರು. ಇದರಿಂದಾಗಿ ಈ ಸಹಕಾರಿ ಸಂಸ್ಥೆಗಳು ಶೂನ್ಯ ತ್ಯಾಜ್ಯ ಯೋಜನೆಗಳಿಗಾಗಿ ಹೌಸಿಂಗ್ ಸೊಸೈಟಿಗಳು ಮತ್ತು ಇತರ ಸಂಸ್ಥೆಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳಲು ಸಾಧ್ಯವಾಯಿತು. ತ್ಯಾಜ್ಯ ಆಯುವ ಸಹಕಾರಿ ಸಂಸ್ಥೆಗಳು ತ್ಯಾಜ್ಯ ನಿರ್ವಹಣೆಯ ಗುತ್ತಿಗೆಯನ್ನೂ ತೆಗೆದುಕೊಳ್ಳಲಾರಂಭಿಸಿದವು. ಅವರು 50 ವಸತಿ ಸಂಕೀರ್ಣಗಳಲ್ಲಿ ಶೂನ್ಯ ತ್ಯಾಜ್ಯ ಯೋಜನೆಗಳನ್ನು ಪ್ರಾರಂಭಿಸಿದರು. ತರಬೇತಿ ಪಡೆದ ತ್ಯಾಜ್ಯ ಆಯುವ ಕಾರ್ಮಿಕರು ವಸತಿ ಸಂಕೀರ್ಣಗಳಿಂದ ಒಣ ತ್ಯಾಜ್ಯವನ್ನು ಸಂಗ್ರಹಿಸಿದರೆ, ಸೊಸೈಟಿಯ ಆವರಣದಲ್ಲಿಯೇ ಹಸಿ ತ್ಯಾಜ್ಯವನ್ನು ಗೊಬ್ಬರವನ್ನಾಗಿಸಿದರು. ಇನ್ನೊಂದೆಡೆ ಈ ಸಹಕಾರಿ ಸಂಸ್ಥೆಗಳ ಸದಸ್ಯರು ತ್ಯಾಜ್ಯಕ್ಕಾಗಿ ಬೇರೆಡೆ ಅಲೆದಾಡಬೇಕಾಗಿಲ್ಲ ; ಈಗ ಅವರು ಮೂಲದಲ್ಲಿಯೇ ತ್ಯಾಜ್ಯವನ್ನು ಸಂಗ್ರಹಿಸುವುದರಿಂದ ಅವರ ಕೆಲಸವು ಈಗ ಸುಲಭವಾಗಿದೆ. ಇದರೊಂದಿಗೆ ಅವರಿಗೆ ನಿರೀಕ್ಷಿತ ಆದಾಯದ ಮೂಲವನ್ನು ಮತ್ತು ಕಾರ್ಮಿಕರಿಗೆ ಘನತೆಯನ್ನು ನೀಡಲಾಗುತ್ತಿದೆ.

ಜೊತೆಗೆ, ಎಸ್‌ಎಂಎಸ್ ಸಂಸ್ಥೆಯು ತ್ಯಾಜ್ಯ ಆಯುವವರ ಸಮುದಾಯಗಳಲ್ಲಿ ಆರೋಗ್ಯ ಶಿಬಿರಗಳನ್ನು, ಡಂಪಿಂಗ್ ಯಾರ್ಡ್‌ಗಳ ಎದುರು ಔಷಧಾಲಯ ಮತ್ತು ಸಮುದಾಯಗಳಿಗೆ ಭೇಟಿ ನೀಡಿ, ತ್ಯಾಜ್ಯ ಆಯುವವರಿಗೆ ಚಿಕಿತ್ಸೆ ನೀಡಲು

[3]SMS Website. https://streemuktisanghatana.org/core-activities/parisar-vikas-initiative/
[4]SMS Website. https://streemuktisanghatana.org/core-activities/parisar-vikas-initiative/
[5]https://globalrec.org/organization/parisar-bhagini-vikas-sangh-pbvs/

ಮೊಬೈಲ್ ವೈದ್ಯಕೀಯ ವ್ಯಾನ್‌ಗಳ ಸೇವೆಯನ್ನು ಒದಗಿಸುತ್ತಿದೆ. ಇನ್ನು ತ್ಯಾಜ್ಯ ಆಯುವವರ ಮಕ್ಕಳಿಗೆ ಸಂಜೆಯ ವೇಳೆಯಲ್ಲಿ ಅಧ್ಯಯನದ ಮಾಡಲು ಸೂಕ್ತ ಸೌಲಭ್ಯಗಳನ್ನು ಒದಗಿಸುವ ಮೂಲಕ, ಅವರಿಗೆ ಅಧ್ಯಯನವನ್ನು ನಿಭಾಯಿಸಲು ಕೂಡಾ ಅನುವು ಮಾಡಿಕೊಡುತ್ತಿದೆ.

ಇನ್ನು ಹದಿಹರೆಯದ ಹೆಣ್ಣುಮಕ್ಕಳಿಗಾಗಿ ಎಸ್‌ಎಂಎಸ್ ಸಂಸ್ಥೆ ರೂಪಿಸಿದ ವಿಶೇಷ ಕಾರ್ಯಕ್ರಮಗಳು ಬಾಲ್ಯವಿವಾಹಗಳನ್ನು ಕಡಿಮೆ ಮಾಡಲು ಸಹಾಯ ಮಾಡಿವೆ.

ತ್ಯಾಜ್ಯ ಆಯುವ ಮಹಿಳೆಯರು ಒಗ್ಗಟ್ಟಾಗದ ಹೊರತು ಅವರ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ಮಹಿಳೆಯರೆಲ್ಲ ಒಟ್ಟಾದರೆ ಬಹಳಷ್ಟು ಸಾಧಿಸಬಹುದು. ಕೇವಲ ನಗರ ಮಟ್ಟದಲ್ಲಿ ಮಾತ್ರವಲ್ಲದೆ, ರಾಜ್ಯ, ರಾಷ್ಟ್ರ ಮತ್ತು ಜಾಗತಿಕ ಮಟ್ಟದಲ್ಲಿ ಮಹಿಳಾ ಸಂಘಟನೆಗಳನ್ನು ಇನ್ನಷ್ಟು ಬಲಪಡಿಸಬೇಕಾಗಿದೆ' ಎಂದು ಜ್ಯೋತಿ ಅಭಿಪ್ರಾಯಪಟ್ಟರು.

ಇಲ್ಲಿಯವರೆಗೆ, ಆರು ನಗರಗಳಲ್ಲಿನ 6,000 ಮಹಿಳಾ ತ್ಯಾಜ್ಯ ಆಯುವ ಕಾರ್ಮಿಕರಿಗೆ ಎಸ್‌ಎಂಎಸ್ ಸಂಸ್ಥೆಯ ಮೂಲಕ ಬೆಂಬಲ ನೀಡಲಾಗಿದೆ. ತ್ಯಾಜ್ಯ ಆಯುವವರ ಜೀವನದಲ್ಲಿ ಆಗಿರುವ ಧನಾತ್ಮಕ ಬದಲಾವಣೆಗಳನ್ನು ಹಂಚಿಕೊಳ್ಳಲು ಜ್ಯೋತಿ ಅವರು ಸಂತೋಷಪಟ್ಟರೂ, ಇನ್ನೂ ಅನೇಕ ಸವಾಲುಗಳು ಉಳಿದಿವೆ ಎಂಬುದನ್ನೂ ಅವರು ಗಮನಿಸಿದ್ದಾರೆ. ತ್ಯಾಜ್ಯ ವಿಂಗಡಣೆ ನೀತಿಗಳ ದುರ್ಬಲ ಅನುಷ್ಠಾನ, ಮಹಿಳಾ ತ್ಯಾಜ್ಯ ಆಯುವವರನ್ನು ವ್ಯವಸ್ಥೆಯಲ್ಲಿ ಸಂಯೋಜಿಸಲು ಸ್ಥಳೀಯ ಅಧಿಕಾರಿಗಳ ನಿರಾಕರಣೆ ಮತ್ತು ನಗರಗಳಲ್ಲಿನ ಮಧ್ಯಮ ವರ್ಗದ ಜನರ ನಿರಾಸಕ್ತಿ ಸೇರಿದಂತೆ ಇನ್ನೂ ಅನೇಕ ಸವಾಲುಗಳಿವೆ.

ಸರ್ಕಾರವು ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆಯ ನೀತಿಗಳ ಅನುಸರಣೆಯನ್ನು ಕಡ್ಡಾಯಗೊಳಿಸಬೇಕು. ದೃಢವಾದ ತ್ಯಾಜ್ಯ ನಿರ್ವಹಣಾ ನೀತಿಗಳನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಬೇಕು. ಜನಸಾಮಾನ್ಯರು ವಿಶೇಷವಾಗಿ ಮಧ್ಯಮ ವರ್ಗದವರು ತ್ಯಾಜ್ಯವನ್ನು ವಿಂಗಡಣೆ ಮಾಡುವಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸಬೇಕು" ಎಂದು ಜ್ಯೋತಿ ಅವರು ಹೇಳಿದರು.

ಈಗಾಗಲೇ ಹೇಳಿದಂತೆ, ಪ್ರಗತಿಪರ ಮತ್ತು ಜನಕೇಂದ್ರಿತ ನೀತಿಗಳು ಬಹಳ ದೂರದವರೆಗೂ ಹೋಗುತ್ತವೆ. ಸಂಪೂರ್ಣ ಬೆಂಬಲ ದೊರೆತರೆ, ತ್ಯಾಜ್ಯ ಆಯುವವರು ತಮ್ಮ ಜೀವನವನ್ನು ಪರಿವರ್ತಿಸುವುದು ಮಾತ್ರವಲ್ಲದೇ, ಅವರು ನಗರಕ್ಕೆ ದೊಡ್ಡ ಪ್ರಮಾಣದ ಹಣವನ್ನು ಉಳಿಸುತ್ತಾರೆ. ಪರಿಸರದ ಮೇಲೆ ತ್ಯಾಜ್ಯದ ಪರಿಣಾಮದ ಕುರಿತು ಜಾಗೃತಿ ಮೂಡಿಸುವುದನ್ನು ಕಡಿಮೆಗೊಳಿಸಬಾರದು. ಹೀಗಾಗಿ ಆದಷ್ಟು ತ್ವರಿತವಾಗಿ ಸರ್ಕಾರಗಳು ಇದನ್ನು ಅರಿತುಕೊಳ್ಳಲಿ ಎಂದು ಜ್ಯೋತಿ ಆಶಿಸಿದರು.






# ಅಲಯನ್ಸ್ ಆಫ್ ಇಂಡಿಯನ್ ವೇಸ್ಟ್ ಪಿಕ್ಕರ್ಸ್

## ರಾಷ್ಟ್ರೀಯ ಮಟ್ಟದಲ್ಲಿ ತ್ಯಾಜ್ಯ ಶ್ರಮಿಕರ ಧ್ವನಿ

2008ರ ಹೊತ್ತಿಗೆ, ಭಾರತದಲ್ಲಿರುವ ನಗರ ಮಟ್ಟದ ತ್ಯಾಜ್ಯ ಆಯುವವರ ಗುಂಪುಗಳು, ತ್ಯಾಜ್ಯ ನಿರ್ವಹಣೆಯಲ್ಲಿ ಅನೇಕ ಸುಧಾರಣೆಗಳನ್ನು ಮತ್ತು ತಮ್ಮ ಸಮುದಾಯಗಳಲ್ಲಿರುವ ತ್ಯಾಜ್ಯ ಆಯುವವರ ಜೀವನವನ್ನು ಪರಿವರ್ತಿಸಿವೆ.

ಆದರೆ ಅವರ ಮಧ್ಯಸ್ಥಿಕೆಗಳು ತಮ್ಮ ನಗರಗಳಲ್ಲಿ ಸುಧಾರಣೆಗಳನ್ನು ಮಾಡುತ್ತಿರುವಾಗ, ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯಲ್ಲಿ ತ್ಯಾಜ್ಯ ಆಯುವವರ ಸೇರ್ಪಡೆ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ತ್ಯಾಜ್ಯ ಆಯುವವರ ಏಕೀಕರಣಕ್ಕಾಗಿ ರಾಷ್ಟ್ರೀಯ ಮಟ್ಟದ ಪ್ರಚಾರ ಅಗತ್ಯವಾಗಿದೆ.

"ಆ ಸಮಯದಲ್ಲಿ, 2001ರ ದೇಶದ ಮುನ್ಸಿಪಲ್ ಘನತ್ಯಾಜ್ಯ ನಿರ್ವಹಣೆ (SWM) ನಿಯಮಗಳಲ್ಲಿ ತ್ಯಾಜ್ಯವನ್ನು ಆಯುವವರ ಬಗ್ಗೆ ಯಾವುದೇ ಉಲ್ಲೇಖ ಇರಲಿಲ್ಲ" ಎಂದು ಅಲಯನ್ಸ್ ಆಫ್ ಇಂಡಿಯನ್ ವೇಸ್ಟ್ ಪಿಕ್ಕರ್ಸ್ನ ರಾಷ್ಟ್ರೀಯ ಸಂಯೋಜಕರಾದ ಕಬೀರ್ ಅರೋರಾ ಹೇಳಿದರು.

"ಇದಲ್ಲದೆ, ತ್ಯಾಜ್ಯ ಆಯುವವರ ಸಂಘಟನೆಯು ನವದೆಹಲಿ, ಮುಂಬೈ, ಪುಣೆ ಮತ್ತು ಅಹಮದಾಬಾದ್ ಸೇರಿ ನಾಲ್ಕು ನಗರಗಳಿಗೆ ಮಾತ್ರ ಸೀಮಿತವಾಗಿತ್ತು. ಹೀಗಾಗಿ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ತ್ಯಾಜ್ಯ ಆಯುವವರನ್ನು ಸೇರಿಸುವುದನ್ನು ಖಚಿತಪಡಿಸಿಕೊಳ್ಳಲು ಸಂಘಟಿತ ಪ್ರಯತ್ನಗಳನ್ನು ಹೊಂದಲು ಒಕ್ಕೂಟದ ಅಗತ್ಯವಿದೆ ಎಂದು ತ್ಯಾಜ್ಯ ಆಯುವವರ ಸಂಸ್ಥೆಗಳು ಭಾವಿಸಿದವು.

ತ್ಯಾಜ್ಯ ಆಯುವವರು ದೇಶದ ಜನಸಂಖ್ಯೆಯ ಶೇ.1-2ರಷ್ಟಿದ್ದು, ನಗರ ಸಮುದಾಯದ ಅವಿಭಾಜ್ಯ ಅಂಗವಾಗಿದ್ದಾರೆ. ಸ್ಥಳೀಯ ಆರ್ಥಿಕತೆಗಳು, ಸಾರ್ವಜನಿಕ ಆರೋಗ್ಯ ಮತ್ತು ಸುರಕ್ಷತೆಗೆ ಅಪಾರ ಕೊಡುಗೆ ನೀಡುತ್ತಿರುವ ಹಾಗೂ ತ್ಯಾಜ್ಯ ಹಾಗೂ ಪರಿಸರ ನಾಶದಿಂದಾಗಿ ಹೆಚ್ಚು ಪ್ರಭಾವಕ್ಕೊಳಗಾಗಿರುವ ಈ ಸಮುದಾದ ಬಗ್ಗೆ ದೇಶದ ಪುರಸಭೆಯ ತ್ಯಾಜ್ಯ ನಿರ್ವಹಣಾ ನೀತಿಯ ಚೌಕಟ್ಟು ಮತ್ತು ಸರ್ಕಾರದ ನೀತಿಗಳು ಮೌನವಹಿಸಿರುವುದು, ತ್ಯಾಜ್ಯ ಆಯುವವರ ಮೇಲೆ ನೇರ ಪರಿಣಾಮ ಬೀರುತ್ತಿದೆ.

ಪ್ರಾರಂಭದ ಎಂಟು ವರ್ಷಗಳ ನಂತರ, ಅಲಯನ್ಸ್ ಆಫ್ ಇಂಡಿಯನ್ ವೇಸ್ಟ್ ಪಿಕ್ಕರ್ಸ್ ಒಕ್ಕೂಟವು ಒಂದು ಪ್ರಮುಖ ಗೆಲುವು ಸಾಧಿಸಿತು. ಹಲವು ವರ್ಷಗಳ ಪ್ರಚಾರದ ನಂತರ, 2016ರ ಘನ ತ್ಯಾಜ್ಯ ನಿರ್ವಹಣಾ (ಎಸ್‌ಡಬ್ಲ್ಯೂಎಂ) ನಿಯಮಗಳು ಅಂತಿಮವಾಗಿ ತ್ಯಾಜ್ಯ ಆಯುವವರನ್ನು ಮತ್ತು ಅನೌಪಚಾರಿಕ ತ್ಯಾಜ್ಯ ಸಂಗ್ರಾಹಕರನ್ನು ಒಳಗೊಂಡಿವೆ.

"ನಮ್ಮ ಸಹೋದ್ಯೋಗಿ, ಕೆಕೆಪಿಕೆಪಿ ಸಂಸ್ಥೆಯ ಹರ್ಷದ್ [ಬರ್ಡೆ] ಅವರು ಈ ನಿಯಮಗಳನ್ನು ರಚಿಸುವ ಸಮಿತಿಯ ಭಾಗವಾಗಿದ್ದರು" ಎಂದು ಕಬೀರ್ ಹೇಳಿದರು.

2016ರ ಎಸ್ಡಬ್ಲ್ಯೂಎಂ ನಿಯಮಗಳಲ್ಲಿ, ತ್ಯಾಜ್ಯ ಆಯುವವರನ್ನು, ತ್ಯಾಜ್ಯ ಉತ್ಪಾದನೆಯ ಮೂಲದಿಂದ ಮರುಬಳಕೆ ಮಾಡಬಹುದಾದ ತ್ಯಾಜ್ಯ ಸಂಗ್ರಹಣೆ ಹಾಗೂ ವಿಂಗಡನೆಯಲ್ಲಿ ಅನೌಪಚಾರಿಕವಾಗಿ ತೊಡಗಿಸಿಕೊಂಡಿರುವ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಎಂದು ವ್ಯಾಖ್ಯಾನಿಸಲಾಗಿದೆ. ಬೀದಿಗಳು, ಕಸದ ತೊಟ್ಟಿಗಳಲ್ಲಿ ಸಿಗುವ ತ್ಯಾಜ್ಯವನ್ನು ವಸ್ತುಗಳ ಮರುಬಳಕೆ ಸೌಲಭ್ಯ, ಸಂಸ್ಕರಣೆ ಮತ್ತು ತ್ಯಾಜ್ಯ ವಿಲೇವಾರಿ ಸೌಲಭ್ಯಗಳನ್ನು ಬಳಸಿಕೊಂಡು ನೇರವಾಗಿ ಅಥವಾ ಮಧ್ಯವರ್ತಿಗಳ ಮೂಲಕ ಜೀವನೋಪಾಯಕ್ಕಾಗಿ ಅವರು ಮಾರಾಟ ಮಾಡುತ್ತಾರೆ.

ಇಂಟರ್ನ್ಯಾಷನಲ್ ಅಲೈಯನ್ಸ್ ಆಫ್ ವೇಸ್ಟ್ ಪಿಕರ್ಸ್‌ಗಾಗಿ, ಬರೆದ ಲೇಖನದಲ್ಲಿ, ಕಬೀರ್ ಅರೋರಾ ಅವರು ಎಸ್ಡಬ್ಲ್ಯೂಎಂನ ಹೊಸ ನಿಯಮಗಳಲ್ಲಿ ತ್ಯಾಜ್ಯ ಆಯುವವರನ್ನು ಸೇರಿಸಿರುವುದನ್ನು "ಸಂಭ್ರಮಾಚರಣೆಯ ವಿಷಯ" ಎಂದು ಕರೆದಿದ್ದಾರೆ.

ಅನೌಪಚಾರಿಕ ತ್ಯಾಜ್ಯ ಆರ್ಥಿಕತೆಯಲ್ಲಿನ ಎಲ್ಲಾ ಸಂಬಂಧಿತ ವೃತ್ತಿಗಳನ್ನು ಒಳಗೊಂಡಿರುವುದರಿಂದ ಅಂತಹ ಕ್ರಮವು ಸ್ವಾಗತಾರ್ಹವಾಗಿದೆ. ಇದಲ್ಲದೆ, ಈ ನಿಯಮಗಳು ತ್ಯಾಜ್ಯ ಆಯುವವರಿಗೆ ಮತ್ತು ಅನೌಪಚಾರಿಕ ತ್ಯಾಜ್ಯ ಸಂಗ್ರಾಹಕರಿಗೆ ಔದ್ಯೋಗಿಕ ಗುರುತಿನ ಚೀಟಿಗಳನ್ನು ನೀಡುವುದನ್ನು ಮತ್ತು ಮನೆಮನೆಗೆ ತ್ಯಾಜ್ಯ ಸಂಗ್ರಹಣೆಗಾಗಿ ಅವರನ್ನು ಏಕೀಕರಣಗೊಳಿಸುವುದು ಸ್ಥಳೀಯ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತ್‌ಗಳ ಜವಾಬ್ದಾರಿ ಮತ್ತು ಕರ್ತವ್ಯ ಎಂದು ಪ್ರಸ್ತಾಪಿಸಿದೆ.

ಇದಲ್ಲದೆ, ಈ ನಿಯಮಗಳು ತ್ಯಾಜ್ಯ ಮರುಬಳಕೆ ಸೌಲಭ್ಯಗಳನ್ನು ಸ್ಥಾಪಿಸುವಂತೆ ಆದೇಶಿಸುವುದರ ಜೊತೆಗೆ ತ್ಯಾಜ್ಯವನ್ನು ಸಂಗ್ರಹಿಸುವ ಮತ್ತು ತ್ಯಾಜ್ಯ ಸಂಗ್ರಾಹಕರಿಗೆ ಅವರು ಸಂಗ್ರಹಿಸಿದ ತ್ಯಾಜ್ಯದಿಂದ ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಪ್ರತ್ಯೇಕಿಸಲು ಅನುವು ಮಾಡಿಕೊಡಬೇಕು ಹಾಗೂ ಅನೌಪಚಾರಿಕ ತ್ಯಾಜ್ಯ ಮರುಬಳಕೆಯ ವಲಯದಿಂದ ಮರುಬಳಕೆಯ ಉಪಕ್ರಮಗಳಿಗೆ ಪ್ರೋತ್ಸಾಹವನ್ನು ಒದಗಿಸುವ ಅಗತ್ಯವಿದೆ ಎಂದು ಹೇಳಿದೆ. ಇದಕ್ಕಾಗಿ ತರಬೇತಿಯ ಮೂಲಕ ತ್ಯಾಜ್ಯ ಆಯುವವರು ಮತ್ತು ತ್ಯಾಜ್ಯ ಸಂಗ್ರಹಿಸುವವರ ಸಾಮರ್ಥ್ಯ ನಿರ್ಮಾಣ ಮಾಡಲು ಸ್ಥಳೀಯ ಸಂಸ್ಥೆಗಳಿಗೆ ಸೂಚನೆ ನೀಡಲಾಗಿದೆ. ಇನ್ನು ಈ ನಿಯಮಗಳ ಅನುಷ್ಠಾನಕ್ಕಾಗಿ, ಸ್ಥಳೀಯ ಸಂಸ್ಥೆಗಳ ಉಸ್ತುವಾರಿ ಇಲಾಖೆಗಳಲ್ಲಿ ರಾಜ್ಯ ಮಟ್ಟದ ಸಲಹಾ ಸಮಿತಿಗಳನ್ನು ರಚಿಸಲು ಎಲ್ಲಾ ರಾಜ್ಯ ಸರ್ಕಾರಗಳಿಗೆ ತಿಳಿಸಲಾಗಿದೆ. ಈ ಸಮಿತಿಯು ತ್ಯಾಜ್ಯ ಆಯುವ ಮತ್ತು ಅನೌಪಚಾರಿಕ ತ್ಯಾಜ್ಯ ಮರುಬಳಕೆದಾರರ ಪ್ರತಿನಿಧಿಗಳನ್ನು ಹೊಂದಿರುತ್ತದೆ " ಎಂದು ಕಬೀರ್ ಅವರು ಬರೆದಿದ್ದಾರೆ.

ಕೆಲವೇ ವರ್ಷಗಳ ಹಿಂದೆ, ತ್ಯಾಜ್ಯ ಆಯುವುದನ್ನು ಕಾನೂನುಬದ್ಧ ಕೆಲಸವೆಂದು ಪರಿಗಣಿಸಲಾಗಿರಲಿಲ್ಲ ಮತ್ತು ತ್ಯಾಜ್ಯ ಕಾರ್ಮಿಕರನ್ನು ತಮ್ಮ ಕೆಲಸಕ್ಕಾಗಿ ಕಿರುಕುಳ ಮತ್ತು ಬೆದರಿಕೆ ಹಾಕುತ್ತಿದ್ದರು ಎಂಬುದನ್ನು ನೆನಪು ಮಾಡಿಕೊಳ್ಳಬಹುದು.

ಇದೇ ಮೊದಲ ಬಾರಿಗೆ, ನಿರ್ವಹಿಸಬೇಕಾದ ಜವಾಬ್ದಾರಿಗಳಲ್ಲಿ ಸ್ಪಷ್ಟತೆ ಇದೆ. ತ್ಯಾಜ್ಯ ವಿಂಗಡಣೆಗೆ ಸ್ಥಳಗಳನ್ನು





ಒದಗಿಸುವುದು, ತ್ಯಾಜ್ಯ ಆಯುವವರ ಜೊತೆಗೂಡಿ ತ್ಯಾಜ್ಯ ವಿಂಗಡನೆ ಮಾಡುವಂತೆ ಪುರಸಭೆಯ ಅಧಿಕಾರಿಗಳಿಗೆ ಆದೇಶವಾಗಿದೆ. ಹೀಗಾಗಿಯೇ ಇದು ತ್ಯಾಜ್ಯವನ್ನು ಆಯುವವರ ದಾಖಲಾತಿಯನ್ನು ಕಾನೂನಿನಿಂದ ಕಡ್ಡಾಯಗೊಳಿಸಿದ ಮೊದಲ ಕಾನೂನು ದಾಖಲೆಯಾಗಿದೆ "ಎಂದು ಕಬೀರ್ ಅಭಿಪ್ರಾಯ ಪಟ್ಟಿದ್ದಾರೆ.

### ಸದ್ಯ ನಡೆಯುತ್ತಿರುವ ಅಭಿಯಾನಗಳು :

ಇಂದು, ಅಲಯನ್ಸ್ ಆಫ್ ಇಂಡಿಯನ್ ವೇಸ್ಟ್ ಪಿಕ್ಕರ್ಸ್ ಒಕ್ಕೂಟವು ತನ್ನ ಸದಸ್ಯತ್ವವನ್ನು 25 ಸಂಸ್ಥೆಗಳಿಗೆ ವಿಸ್ತರಿಸಿದ್ದು, ದೇಶಾದ್ಯಂತ 100,000ಕ್ಕೂ ಹೆಚ್ಚು ತ್ಯಾಜ್ಯ ಆಯುವವರನ್ನು ಪ್ರತಿನಿಧಿಸುತ್ತಿದೆ. ಒಕ್ಕೂಟವು ಸದಸ್ಯ ಸಂಸ್ಥೆಗಳು ಮತ್ತು ಪುರಸಭೆಗಳಿಗೆ ತರಬೇತಿಯನ್ನು ನಡೆಸುವುದು, ನೀತಿ ವಿಶ್ಲೇಷಣೆ ಮತ್ತು ಶಿಫಾರಸುಗಳನ್ನು ಅಭಿವೃದ್ಧಿಪಡಿಸುವುದು, ತ್ಯಾಜ್ಯ ಆಯುವವರ ಸ್ಥಿತಿ ಮತ್ತು ಸಮಸ್ಯೆಗಳ ಕುರಿತು ಸಂಶೋಧನೆ ನಡೆಸುವುದು ಮತ್ತು ಭಾರತದಲ್ಲಿ ತ್ಯಾಜ್ಯ ಆಯುವವರನ್ನು ಸಂಘಟಿಸುವ ಮೂಲಕ ತ್ಯಾಜ್ಯ ಆಯುವವರ ಸಮಸ್ಯೆಗಳನ್ನು ಪ್ರತಿಪಾದಿಸುವುದನ್ನು ಮುಂದುವರೆಸಿದೆ.

ಅಲಯನ್ಸ್ ಆಫ್ ಇಂಡಿಯನ್ ವೇಸ್ಟ್ ಪಿಕ್ಕರ್ಸ್ ಒಕ್ಕೂಟವು ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಗಟ್ಟಲು ಅಂತರಾಷ್ಟ್ರೀಯ ಮಟ್ಟದಲ್ಲಿ ಕಾನೂನು ಮಾನದಂಡಗಳನ್ನು ರೂಪಿಸಲು, ಯುನೈಟೆಡ್ ನೇಷನ್ಸ್ ಫ್ರೇಮ್‌ವರ್ಕ್ ಕನ್ವೆನ್ಷನ್ ಆನ್ ಕ್ಲೈಮೇಟ್ ಚೇಂಜ್ (UNFCCC), ಇಂಟರ್ ಗವರ್ನಮೆಂಟಲ್ ನೆಗೋಷಿಯೇಷನ್ಸ್ ಕಮಿಟಿ (COP)ಯಂತಹ ಅಂತರರಾಷ್ಟ್ರೀಯ ನೀತಿ ರೂಪಿಸುವ ವೇದಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ, ತ್ಯಾಜ್ಯ ನಿರ್ವಹಣೆಯ ಚರ್ಚೆಗಳಲ್ಲಿ ತ್ಯಾಜ್ಯ ಆಯುವವರ ಸಮಸ್ಯೆಗಳು ಹಿಂದೆಂದಿಗಿಂತಲೂ ಹೆಚ್ಚು ಪ್ರಮುಖವಾಗಿವೆ.

ತ್ಯಾಜ್ಯ ಆಯುವವರನ್ನು ತಮ್ಮೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕೆಂದು ಪುರಸಭೆಗಳು ಈಗ ಅರ್ಥಮಾಡಿಕೊಂಡಿವೆ. ಈ ಒಕ್ಕೂಟವನ್ನು ಸ್ಥಾಪಿಸುವುದಕ್ಕೂ ಮೊದಲು, ತ್ಯಾಜ್ಯ ಮತ್ತು ತ್ಯಾಜ್ಯ ಆಯುವವರು ಹಾಗೂ ಅನೌಪಚಾರಿಕ ತ್ಯಾಜ್ಯ ಮರುಬಳಕೆ ವಲಯದ ಬಗ್ಗೆ ಜನಸಾಮಾನ್ಯರ ತಿಳುವಳಿಕೆ ಬಹಳ ಸಾರ್ವತ್ರಿಕವಾಗಿತ್ತು. ಆದರೆ ಈಗ ಅವರು ತ್ಯಾಜ್ಯ ಸಂಗ್ರಹದಲ್ಲಿರುವ ಜಟಿಲತೆಗಳನ್ನು ಅರ್ಥೈಸಿಕೊಂಡಿದ್ದು, ಸಮುದಾಯದಲ್ಲಿ ವಿಭಿನ್ನ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಅದನ್ನು ಕಾರ್ಯತಂತ್ರದ ರೀತಿಯಲ್ಲಿ ನಿಭಾಯಿಸಲು ಸಮರ್ಥರಾಗಿದ್ದಾರೆ" ಎಂದು ಕಬೀರ್ ಮತ್ತು ಅವರ ಸಹೋದ್ಯೋಗಿ ಹಾರಿಸ್ ನಜೀಬ್ ಜಿಎಐಎ ಸಂಸ್ಥ ಯೊಂದಿಗಿನ ಪ್ರತ್ಯೇಕ ಸಂದರ್ಶನದಲ್ಲಿ ಹೇಳಿದ್ದಾರೆ.

ತನ್ನನ್ನು ತಾನು ಬಲಪಡಿಸಿಕೊಳ್ಳಲು ನೋಡುತ್ತಿರುವ ಈ ಒಕ್ಕೂಟವು ಪ್ರಸ್ತುತ ತ್ಯಾಜ್ಯ ಆಯುವವರ ಡೇಟಾಬೇಸ್ ಸಿದ್ದಪಡಿಸಲು ಕಾರ್ಯನಿರ್ವಹಿಸುತ್ತಿದೆ.

ನಮ್ಮ ಅನೇಕ ಸದಸ್ಯ ಸಂಸ್ಥೆಗಳು ಸಂಘಟಿತ ತ್ಯಾಜ್ಯ ಆಯುವವರ ಮೂಲ ಡೇಟಾವನ್ನು ಸಂಗ್ರಹಿಸಿಕೊಳ್ಳುತ್ತಿವೆ. ಆದರೂ, ತ್ಯಾಜ್ಯ ಆಯುವವರ ಸದಸ್ಯತ್ವ ಮತ್ತು ಭಾರತದಲ್ಲಿ ತ್ಯಾಜ್ಯ ಆಯುವವರ ಸ್ಥಿತಿಯ ಅವಲೋಕನ ಮಾಡಲು, ನಮಗೆ ಹೆಚ್ಚು ವಿವರ ಮತ್ತು ನಿಖರವಾದ ಡೇಟಾಬೇಸ್ ಅಗತ್ಯವಿದೆ. ಅದೇ ರೀತಿ ಈ ಡೇಟಾಬೇಸ್ ನಮ್ಮ ಪ್ರಸ್ತುತ ಮತ್ತು ಭವಿಷ್ಯದ ವಕಾಲತ್ತು ಕಾರ್ಯಗಳಿಗೆ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುತ್ತದೆ" ಕಬೀರ್ ಅರೋರಾ ಅವರು ಹೇಳಿದರು.

ವಿಸ್ತೃತ ಉತ್ಪಾದಕರ ಜವಾಬ್ದಾರಿ (ಇಪಿಆರ್) ಮತ್ತು ಪ್ಲ್ಯಾಸ್ಟಿಕ್ ಸುತ್ತಲಿನ ಸಮಸ್ಯೆಗಳು ಸೇರಿದಂತೆ ತ್ಯಾಜ್ಯ ನಿರ್ವಹಣೆಯ ಕುರಿತಾದ ಕಾರ್ಯಕ್ರಮಗಳು ಮತ್ತು ನೀತಿಗಳ ಕುರಿತು ಈ ಒಕ್ಕೂಟವು ಸಕ್ರಿಯವಾಗಿ ಗಮನ ಹರಿಸುತ್ತಿದೆ.

ಭಾರತದ ನೀತಿ-ನಿರೂಪಣೆಯ ವಿಸ್ತಾರತೆಯು ತುಂಬಾ ಶಕ್ತಿಯುತವಾಗಿದೆ. ಹೀಗಾಗಿ ಇಲ್ಲಿ ನಾವು ಅಧಿಕಾರಿಗಳೊಂದಿಗೆ ನಿರಂತರ ಮಾತುಕತೆ ಹಾಗೂ ಅನೇಕ ವರ್ಷಗಳ ಹೋರಾಟದ ಮೂಲಕ ಒಂದು ಮಾದರಿಯನ್ನು ತ್ಯಾಜ್ಯ ಆಯುವವರಿಗಾಗಿ ರೂಪಿಸಲಾಗಿದ್ದು, ಇದನ್ನು ನಿರ್ಲಕ್ಷಿಸುವಂತಿಲ್ಲ ಎಂದು ಕಬೀರ್ ಅರೋರಾ ಅಭಿಪ್ರಾಯಪಟ್ಟರು.

ಪುರಸಭೆ ಅಧಿಕಾರಿಗಳು ತಮ್ಮ ನೀತಿಗಳನ್ನು ಬದಲಾಯಿಸುವುದು ಸೇರಿದಂತೆ ಸದಸ್ಯರು ಅನೇಕ ಸವಾಲುಗಳನ್ನು ಎದುರಿಸುತ್ತಾರೆ. ಆಗ ತ್ಯಾಜ್ಯವನ್ನು ಆಯುವವರಿಗೆ ಅನುಕೂಲವಾಗುವ ನೀತಿಗಳನ್ನು ಇರಿಸಿಕೊಳ್ಳಲು ನಾವು ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಬೇಕು. ಎರಡನೆಯದಾಗಿ, ಎಲ್ಲಾ ತ್ಯಾಜ್ಯ ಆಯುವವರು ವಿವಿಧ ಕಾನೂನುಗಳು ಮತ್ತು ನೀತಿಗಳಲ್ಲಿ ವಿವರಿಸಿರುವ ಪ್ರಯೋಜನಗಳನ್ನು ಪಡೆಯುವುದಿಲ್ಲ. ಈ ವಲಯದ ವಿಸ್ತಾರವಾದ ಗಾತ್ರ ಮತ್ತು ನಮ್ಮಲ್ಲಿರುವ ಸೀಮಿತ ಸಂಪನ್ಮೂಲಗಳನ್ನು ಗಮನಿಸಿದರೆ, ನಾವು ಕೆಲವರನ್ನು ಮಾತ್ರ ತಲುಪಬಹುದು.

ಇತರ ತ್ಯಾಜ್ಯ ಆಯುವವರ ಸಂಸ್ಥೆಗಳೊಂದಿಗೆ, ಅಲಯನ್ಸ್ ಆಫ್ ಇಂಡಿಯನ್ ವೇಸ್ಟ್ ಪಿಕ್ಕರ್ಸ್ ಒಕ್ಕೂಟವು ಸಹ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನೀತಿ-ರೂಪಿಸುವ ವೇದಿಕೆಗಳಲ್ಲಿ ಹವಾಮಾನ ಬದಲಾವಣೆಯನ್ನು ತಗ್ಗಿಸುವಲ್ಲಿ ತ್ಯಾಜ್ಯ ಆಯುವವರ ಪಾತ್ರವನ್ನು ಸಕ್ರಿಯವಾಗಿ ಹೆಚ್ಚಿಸುತ್ತಿದೆ.

ಇನ್ನು ಭಾರತ, ಬಾಂಗ್ಲಾದೇಶ ಮತ್ತು ಇತರ ಸ್ಥಳಗಳಲ್ಲಿ ನಮಗೆ ತಿಳಿದಿರುವಂತೆ ಬಹಳಷ್ಟು ತ್ಯಾಜ್ಯ ಆಯುವವರು ಹವಾಮಾನ ಬದಲಾವಣೆ ಸಂಬಂಧಿತ ಘಟನೆಗಳಿಂದ ಸ್ಥಳಾಂತರಗೊಂಡಿದ್ದಾರೆ. ಅವರಲ್ಲಿ ಬಹಳಷ್ಟು ಜನರನ್ನು ವ್ಯವಸ್ಥೆಯಲ್ಲಿ ಸಂಯೋಜಿಸಲು ಪ್ರಾರಂಭಿಸಿದಾಗ, ಸಾವಯವ ತ್ಯಾಜ್ಯ ನಿರ್ವಹಣೆ ಮತ್ತು ಮಿಶ್ರಗೊಬ್ಬರದಲ್ಲಿ ತೊಡಗಿಸಿಕೊಂಡಿದ್ದಾರೆ. ಅದೇ ರೀತಿ ಅವರು ತ್ಯಾಜ್ಯ ಮರುಬಳಕೆಯಲ್ಲಿ ತೊಡಗಿಸಿಕೊಂಡಾಗ, ಅವರು ತ್ಯಾಜ್ಯವನ್ನು ಡಂಪ್ ಯಾರ್ಡ್ಗಳಿಂದ ಬೇರೆಡೆಗೆ ತಿರುಗಿಸುತ್ತಾರೆ. ಹೀಗಾಗಿ ಮೀಥೇನ್ ಹೊರಸೂಸುವಿಕೆಯಿಂದಾಗುವ ಮಾಲಿನ್ಯವನ್ನು ತಡೆಗಟ್ಟುವಲ್ಲಿ, ತ್ಯಾಜ್ಯ ಆಯುವವರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ಹೇಳಿದರು.

"ತ್ಯಾಜ್ಯ ಆಯ್ದುಕೊಳ್ಳುವವರನ್ನು ಬೆಂಬಲಿಸುವುದು ಹವಾಮಾನ ಬದಲಾವಣೆ ತಗ್ಗಿಸುವಿಕೆಯ ಕಡೆಗೆ ಉತ್ತಮ ಹೆಜ್ಜೆಯಾಗಿದೆ. ನಾವು ಈ ಅವಕಾಶವನ್ನು ಕಳೆದುಕೊಳ್ಳದಿರುವುದು ಮುಖ್ಯವಾಗಿದೆ " ಎಂಬುದು ಕಬೀರ್ ಅರೋರಾ ಅವರ ಅಭಿಪ್ರಾಯವಾಗಿದೆ.





©AMIT THAVARAJ, FOR KKPKP


©AMIT THAVARAJ, FOR KKPKP



©AMIT THAVARAJ, FOR KKPKP


©AMIT THAVARAJ, FOR KKPKP

**ON THE GROUND:Stories of Waste Workers and Waste Pickers in Asia** | VOLUME 1: **INDIA**
©January 2023 Global Alliance for Incinerator Alternatives
Unit 330, Eagle Court Condominium 26 Matalino Street,
Barangay Central, Quezon City, Philippines